ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 23 ಜೂನ್ 5, 1983 ಬೆಲೆ 60 ಪೈಸೆ

ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆ

ಎಡರಂಗಕ್ಕೆ ಮಹತ್ವದ ಗೆಲುವು

ಮೇ 31ರಂದು ಪಶ್ಚಿಮ ಬಂಗಾಳದಲ್ಲಿ ನಡೆದ ಪಂಚಾಯತ್ ಚುನಾವಣೆಗಳಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ಎಡರಂಗವು ಭಾರಿ ಬಹುಮತ ಪಡೆದು ತನ್ನ ಜನಪ್ರಿಯತೆಯನ್ನು ಸಾಬೀತುಗೊಳಿಸಿದೆ.


ಈ ಚುನಾವಣೆಯ ಹುತ್ತೊಂದು ವಿಶಿಷ್ಟ ಅಂಶ 266 ಮಂದಿ ಸಿ. ಪಿ. ಐ. (ಎಂ) ಉಮೇದುವಾರರು ಅವಿರೋಧವಾಗಿ ಆಯ್ಕೆಯಾಗಿರುವುದು.

ಜಿಲ್ಲಾ ಪರಿಷತ್ತು, ಪಂಚಾಯತ್ ಸಮಿತಿಗಳು, ಗ್ರಾಮಪಂಚಾಯ್ತಿಗಳ ಒಟ್ಟು 55 ಸಾವಿರದ 145 ಸ್ಥಾನಗಳಿಗೆ ಚುನಾವಣೆಗಳನ್ನು ನಡೆಸಲಾಯಿತು. ಎಡರಂಗದ ಅಂಗಪಕ್ಷವಾದ ಸಿ. ಪಿ. ಐ. (ಎಂ) 7 ಸಾವಿರ ಸ್ಥಾನಗಳನ್ನು ತನ್ನ ಇತರ ಮಿತ್ರ ಪಕ್ಷಗಳಿಗೆ ಬಿಟ್ಟುಕೊಟ್ಟು ಉಳಿದೆಲ್ಲಾ ಸ್ಥಾನಗಳಿಗೂ ಸ್ಪರ್ಧಿಸಿತ್ತು. ಇದುವರೆಗೆ 44,625 ಫಲಿತಾಂಶಗಳು ಪ್ರಕಟವಾಗಿದ್ದು ಇದರಲ್ಲಿ 27,491 ಸ್ಥಾನಗಳನ್ನು ಎಡರಂಗ ಪಡೆದುಕೊಂಡಿದೆ. ಸಿ. ಪಿ. ಐ. (ಎಂ) 24,064 ಸ್ಥಾನಗಳನ್ನು ಗಳಿಸಿದೆ. ಎಡರಂಗದ ಇತರ ಅಂಗ ಪಕ್ಷಗಳಾದ ಫಾರ್ವರ್ಡ್ ಬ್ಲಾಕ್ 835, ಆರ್.ಎಸ್.ಪಿ 916, ಸಿ.ಪಿ.ಐ 583 ಸ್ಥಾನಗಳನ್ನು ಪಡೆದುಕೊಂಡಿದೆ. ಕಾಂಗ್ರೆಸ್ (ಐ) 14,484 ಸ್ಥಾನಗಳನ್ನು ಗೆದ್ದಿದೆ.

ದುಡಿಯುವ ವರ್ಗಕ್ಕಾಗಿ ಜೀವನವಿಡೀ ದುಡಿದ

ಕಾ॥ ಎಂ. ಆರ್. ವೆಂಕಟರಾಮನ್ ಇನ್ನಿಲ್ಲ

(ಕಳೆದ ಮೇ 23ರಂದು ನಿಧನರಾದ ಪಕ್ಷದ ಹಿರಿಯ ನಾಯಕರೂ, ತಮಿಳುನಾಡಿನಲ್ಲಿ ಕಮ್ಯುನಿಸ್ಟ್ ಚಳುವಳಿಯ ರೂವಾರಿಯೂ, ಸಿ. ಪಿ. ಐ. (ಎಂ)ನ ಕೇಂದ್ರ ಸಮಿತಿ ಸದಸ್ಯರೂ ಆಗಿದ್ದ ಕಾ। ಎಂ. ಆರ್. ವೆಂಕಟರಾಮನ್ ಅವರ ಕುರಿತು ಕಳೆದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು. ಹೆಚ್ಚಿನ ವಿವರಗಳು ದೊರೆಯದೇ ಇದ್ದ ಕಾರಣದಿಂದಲೂ ಅವರ ಫೋಟೋ ಸಿಗದೇ ಇದ್ದುದರಿಂದಾಗಿಯೂ ಅವರ ಕುರಿತಾಗಿ ಹೆಚ್ಚಿನ ವಿವರಗಳನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಈ ಸಂಚಿಕೆಯಲ್ಲಿ ವಿವರಗಳನ್ನು ಪ್ರಕಟಿಸುತ್ತಿದ್ದೇವೆ.)



ತಮಿಳುನಾಡಿನಲ್ಲಿ ಕಮ್ಯೂನಿಸ್ಟ್ ಚಳುವಳಿಯ ಬೆಳವಣಿಗೆಗೂ, ಪ್ರಜಾಪ್ರಭುತ್ವ ಚಳುವಳಿಗೂ ಕಾ। ಎಂ. ಆರ್. ವಿ. ಅವರು ಸಲ್ಲಿಸಿದ ಸೇವೆ ಅತ್ಯಂತ ಅಮೂಲ್ಯವಾದುದು ಎಂಬುದಾಗಿ ಸಿ. ಪಿ. ಐ. (ಎಂ)ನ ಪೊಲಿಟ್ ಬ್ಯೂರೋ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಕಾ। ಎಂ. ಆರ್- ವಿ. ಅವರ ನಿಧನಕ್ಕೆ ತನ್ನ ಅತೀವ ಸಂತಾಪವನ್ನು ವ್ಯಕ್ತಪಡಿಸಿ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ಕಾ। ಎಂ. ಆರ್. ವೆಂಕಟರಾಮನ್ ಅವರ ನಿಧನಕ್ಕೆ ಸಿ. ಪಿ. ಐ. (ಎಂ)ನ ಕರ್ನಾಟಕ ರಾಜ್ಯ ಸಮಿತಿ ತನ್ನ ಆಳವಾದ ಶೋಕವನ್ನು ವ್ಯಕ್ತಪಡಿಸಿ ಕಾ। ಎಂ. ಆರ್. ವಿ. ಅವರ ನಿಧನ ಪಕ್ಷಕ್ಕೂ ದೇಶದ ದುಡಿಯುವ ವರ್ಗಕ್ಕೂ ಉಂಟಾಗಿರುವ ದೊಡ್ಡ ನಷ್ಟ ಎಂಬುದಾಗಿ ತಿಳಿಸಿದೆ. ಕಾ। ಎಂ. ಆರ್. ವಿ. ಅವರ ಕುಟುಂಬಕ್ಕೆ ತನ್ನ ತೀವ್ರ ಸಂತಾಪವನ್ನು ಸಲ್ಲಿಸಿದೆ.

ತನ್ನ ತಲೆಮಾರಿನ ಇತರ ಹಲವು ದೇಶಪ್ರೇಮಿಗಳಂತೆಯೇ ಕಾ। ಎಂ. ಆರ್. ವಿ. ಅವರು ಕೂಡ 1930ರಲ್ಲಿ ಕಾಂಗ್ರೆಸ್ಸಿಗರಾಗಿಯೇ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದರು. ಆದರೆ ನಂತರ ಅವರು ಕಾರ್ಮಿಕ ಚಳುವಳಿ ಮತ್ತು ಕಮ್ಯೂನಿಸ್ಟ್ ಪಕ್ಷಕ್ಕೆ ಆಕರ್ಷಿತರಾದರು.

1935-40ರ ಅವಧಿಯಲ್ಲಿ ವ್ಯಾಪಕವಾಗಿ ಹರಡಿದ ಮುಷ್ಕರದ ಸಂದರ್ಭದಲ್ಲಿ ಬಂಧಿತರಾದ ಕಾರ್ಮಿಕರ ಪರವಾಗಿ ಮದ್ರಾಸ್ ಹೈಕೋರ್ಟಿನಲ್ಲಿ ಕೇಸುಗಳನ್ನು ನಡೆಸಿದರು. ಅವರು ತಮ್ಮ ಸಾಮ್ರಾಜ್ಯಶಾಹಿ ವಿರೋಧಿ ಮನೋಭಾವದಿಂದಾಗಿ ಕ್ರಾಂತಿಕಾರೀ ಚಟುವಟಿಕೆಗಳಲ್ಲಿ ಧುಮುಕುವುದು ಹೆಚ್ಚು ಸುಲಭವಾಯಿತು. ಅಂತಿಮವಾಗಿ ಅವರು 1939ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಅಂದಿನಿಂದಲೂ ಕಾ। ಎಂ. ಆರ್. ವಿ. ಅವರು ತಮ್ಮೆಲ್ಲಾ ಪ್ರತಿಭೆಯನ್ನೂ, ಶಕ್ತಿಯನ್ನೂ ತಮಿಳುನಾಡಿನಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಲು ವಿನಿಯೋಗಿಸತೊಡಗಿದರು.

ಕಿರಿಯ ವಯಸ್ಸಿನ ವಕೀಲರಾಗಿದ್ದ ಅವರಿಗೆ ತಮ್ಮ ವೃತ್ತಿಯಲ್ಲೇ ಒಳ್ಳೆಯ ಅವಕಾಶಗಳಿದ್ದವು. ಆದರೆ ಅದನ್ನು ನಿರಾಕರಿಸಿದ ಕಾ। ಎಂ. ಆರ್. ವಿ. ಒಂದು ಕ್ರಾಂತಿಕಾರೀ ಬದುಕನ್ನು ಬದುಕ ಬಯಸಿದರು. ಅನೇಕ ಬಾರಿ ಜೈಲುವಾಸವನ್ನು ಅನುಭವಿಸಿದರು. ಅವರು ತಮ್ಮ ಜೀವಿತದ 11 ವರ್ಷಗಳನ್ನು ಸೆರೆಮನೆಯಲ್ಲೇ ಕಳೆದಿದ್ದರು. ಮೂರು ವರ್ಷಗಳ ಕಾಲ ಭೂಗತ ಜೀವನ ನಡೆಸಿದ್ದರು. 1948ರಲ್ಲಿ ಕಡಲೂರು ಜೈಲಿನಲ್ಲಿ ಗೋಲಿಬಾರ್ ನಡೆದಾಗ ತಮ್ಮ ಸಹ ಕೈದಿಯಾಗಿದ್ದ ಕಾ। ಎ. ಕೆ. ಜಿ. ಅವರೊಂದಿಗೆ ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದರು.

1942ರಲ್ಲಿ ಆಗಿನ ಅವಿಭಾಜಿತ ಕಮ್ಯೂನಿಸ್ಟ್ ಪಕ್ಷದ ತಮಿಳುನಾಡು ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಚುನಾಯಿತರಾದ ಕಾ। ಎಂ. ಆರ್. ವಿ. ಅವರು ತಮ್ಮೆಲ್ಲಾ ಸಮಯ ಮತ್ತು ಶಕ್ತಿಯನ್ನು ಪಾರ್ಟಿ ಸದಸ್ಯರನ್ನು ಸಂಘಟಿಸುವುದಕ್ಕಾಗಿಯೂ, ಅವರನ್ನು ತರಬೇತು ಗೊಳಿಸುವುದಕ್ಕಾಗಿಯೂ ಬಳಸಿಕೊಂಡರು. ಅಷ್ಟೇ ಅಲ್ಲದೆ ನೆರೆ ರಾಜ್ಯಗಳ ಪಾರ್ಟಿ ಘಟಕಗಳಿಗೂ, ಪಾರ್ಟಿಯ ಕೇಂದ್ರ ಸಮಿತಿಗೂ ಪಾರ್ಟಿ ಸಂಘಟನೆಯನ್ನು ಕಟ್ಟುವ ಕಾರ್ಯದಲ್ಲಿ ನೆರವಾದರು.

'ಎಡಪಂಥ ಮತ್ತು ಬಲಪಂಥ'ಗಳ ತಿರುವುಗಳಿಗೆದುರಾಗಿ ಕಾ। ಎಂ. ಆರ್. ವೆಂಕಟರಾಮನ್ ಅವರು ಓರ್ವ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಎಂಬ ನೆಲೆಯಲ್ಲಿ ದೃಢವಾದ ಹೋರಾಟ ನಡೆಸಿದರು. 1960ರ ಸುಮಾರಿನಲ್ಲಿ ಮಾರ್ಕ್ಸ್‌ವಾದಿ – ಲೆನಿನ್ ವಾದೀ ಸಿದ್ಧಾಂತಗಳಿಂದ ದೂರ ಸರಿದ ಪರಿಷ್ಕರಣವಾದದ ವಿರುದ್ಧ ತೀವ್ರವಾದ ಹೋರಾಟದಲ್ಲಿ ಮಗ್ನರಾದರು. 1964ರಲ್ಲಿ ರಾಷ್ಟ್ರೀಯ ಕೌನ್ಸಿಲ್‌ನಿಂದ ಹೊರಬಂದ ಇತರ ಸಂಗಾತಿಗಳೊಡಗೂಡಿ ಸಿ. ಪಿ. ಐ. (ಎಂ) ಸ್ಥಾಪನೆಯಲ್ಲಿ ಭಾಗಿಗಳಾದರು.

ಎಡಪಂಥೀಯ ತಿರುವುಗಳನ್ನು ಸಹ ಹಿಂದಿನಂತೆಯೇ ವಿರೋಧಿಸಿದ ಕಾ। ಎಂ. ಆರ್. ವಿ. ನಕ್ಸಲ್‌ವಾದೀ ಶಕ್ತಿಗಳಿಗೆದುರಾಗಿ ಅವಿಶ್ರಾಂತ ಹೋರಾಟ ನಡೆಸಿದ್ದರು. ಅಮೇರಿಕ ಸಾಮ್ರಾಜ್ಯಶಾಹಿಗಳಿಗೆದುರಾದ ಹೋರಾಟದಲ್ಲೂ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತಗಳ ಆಧಾರದ ಮೇಲೆ ಸಮಾಜವಾದೀ ಶಿಬಿರದ ಹಾಗೂ ಜಾಗತಿಕ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಗಾಗಿಯೂ ಅವರು ದೃಢವಾಗಿ ಹೋರಾಡಿದರು ಮತ್ತು ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯ ಪತಾಕೆಯನ್ನು ಎತ್ತಿಹಿಡಿದರು.

ಸಿ. ಪಿ. ಐ. (ಎಂ) ಸ್ಥಾಪನೆಯಾದ ನಂತರ ತಮ್ಮ ಕೊನೆಯುಸಿರಿನವರೆಗೂ ಅವರು ಕೇಂದ್ರ ಸಮಿತಿಯ ಸದಸ್ಯರಾಗಿದ್ದರು. ತಮ್ಮ ದೇಹಸ್ಥಿತಿ ಸರಿಯಾಗಿಲ್ಲದೆ ಹೋದಾಗಲೂ ಕೂಡಾ ಕಾ। ಎಂ.ಆರ್.ವಿ. ಸಿ.ಪಿ.ಐ. (ಎಂ)ನ ಕೇಂದ್ರ ನಿಯಂತ್ರಣಾ ಆಯೋಗದ ಸಂಚಾಲಕರಾಗಿ ಇದ್ದುಕೊಂಡು ಅಮೂಲ್ಯ ಸೇವೆ ಸಲ್ಲಿಸಿದ್ದರು.

ಕಳೆದ ಹಲವಾರು ತಿಂಗಳಿಂದ ತೀವ್ರ ಅಸ್ವಸ್ಥತೆಗೆ ಒಳಗಾಗಿದ್ದ ಅವರಿಗೆ ಕಳೆದ ತಿಂಗಳಷ್ಟೇ ಶಸ್ತ್ರಕ್ರಿಯೆ ನಡೆಸಲಾಗಿತ್ತು. ಶಸ್ತ್ರಕ್ರಿಯೆಯ ನಂತರ ಹಲವಾರು ದಿನಗಳ ಕಾಲ ಸಂಪೂರ್ಣವಾಗಿ ಪ್ರಜ್ಞಾಹೀನ ಸ್ಥಿತಿಯಲ್ಲೇ ಇದ್ದರು. ನಂತರ ಸ್ವಲ್ಪ ಚೇತರಿಸಿಕೊಂಡಂತೆ ಕಂಡು ಬಂದಿದ್ದರೂ ಸಹ ಅವರ ಸ್ಥಿತಿ ಮತ್ತೆ ವಿಷಮಗೊಂಡು ಮರಣವನ್ನಪ್ಪಿದರು.

ಕಾ। ಎಂ. ಆರ್. ವಿ. ಅವರ ಮೃತದೇಹವನ್ನು 23ರ ಬೆಳಿಗ್ಗೆ ಮೇ ಪಕ್ಷದ ಕಛೇರಿಗೆ ತರಲಾಯಿತು. ರಾಜ್ಯದ ಎಲ್ಲಾ ಭಾಗಗಳಿಂದಲೂ ಸಂಗಾತಿಗಳು ಆಗಮಿಸಿ ಅಗಲಿದ ನಾಯಕನಿಗಾಗಿ ಶ್ರದ್ಧಾಂಜಲಿ ಅರ್ಪಿಸಿದರು. ದೇಶದ ವಿವಿಧ ಭಾಗಗಳಿಂದ ಬಂದಿದ್ದ ಪಕ್ಷದ ಮುಖಂಡರುಗಳೂ ಮತ್ತು ಪಕ್ಷದ ಕೇಂದ್ರ ಸಮಿತಿ ಸದಸ್ಯರುಗಳೂ ತಮ್ಮ ಅತೀವ ದುಃಖವನ್ನು ವ್ಯಕ್ತಪಡಿಸಿ ಅಗಲಿದ ತಮ್ಮ ಸಂಗಾತಿಗೆ ಪುಷ್ಪಗುಚ್ಛವನ್ನು ಅರ್ಪಿಸಿ ಕೆಂಪು ನಮನಗಳನ್ನು ಸಲ್ಲಿಸಿದರು.

24ರ ಬೆಳಿಗ್ಗೆ ಕಾ। ವೆಂಕಟರಾಮನ್‌ರವರ ಮೃತದೇಹವನ್ನು ಮೆರವಣಿಗೆಯ ಮೂಲಕ ಕೊಂಡೊಯ್ಯಲಾಯಿತು. ಅಂತಿಮ ಯಾತ್ರೆಯಲ್ಲಿ ಕಾ। ಎಂ. ಬಸವಪುನ್ನಯ್ಯ; ಕಾ. ಪಿ. ರಾಮಮೂರ್ತಿ, ಕಾ. ಪಿ. ಸುಂದರಯ್ಯ, ಕಾ। ಅಬ್ದುಲ್ ರಸೂಲ್, ಕಾ। ಇ. ಕೆ. ನಾಯನಾರ್, ಕಾ। ಅಚ್ಚುತಾನಂದನ್ ಅಲ್ಲದೆ ವಿವಿಧ ರಾಜ್ಯಗಳಿಂದ ಬಂದಿದ್ದ ಪಕ್ಷದ ಪ್ರಮುಖರುಗಳು ಭಾಗವಹಿಸಿದ್ದರು. ಅಂತ್ಯಕ್ರಿಯೆಯ ನಂತರ ನಡೆದ ಸಭೆಯಲ್ಲಿ ಪಕ್ಷದ ಅನೇಕ ಮುಖಂಡರುಗಳು ಮಾತನಾಡಿದರು.

ಕಾ। ಎಂ. ಆರ್. ವೆಂಕಟರಾಮನ್ ಇಂದು ನಮ್ಮಿಂದ ಮರೆಯಾಗಿದ್ದರೂ ಕೂಡ ದುಡಿಯುವ ವರ್ಗಕ್ಕೋಸ್ಕರ ಅವರು ಮಾಡಿರುವ ತ್ಯಾಗ ಮರೆಯಾಗಲಾರದು. ಓರ್ವ ನಿಷ್ಠಾವಂತ ಕಮ್ಯುನಿಸ್ಟರಾಗಿ ಕೊನೆಯುಸಿರಿನವರೆಗೆ ದುಡಿದ ಅವರ ಜೀವನ ನಮ್ಮೆಲ್ಲರಿಗೂ ಮಾರ್ಗದರ್ಶಕವಾಗಲಿ.

ಐಕ್ಯರಂಗ ಓದಿ

ಹಾಗೂ

ನಿಮ್ಮ ಮಿತ್ರರನ್ನೂ

ಓದಿಸಿ

ಬೆಲೆ ಏರಿಕೆ ವಿರುದ್ಧ ದ. ಕನ್ನಡ ಜಿಲ್ಲೆಯಾದ್ಯಂತ ಯಶಸ್ವಿ ಸಾಮೂಹಿಕ ಧರಣಿ ಸತ್ಯಾಗ್ರಹ

ಜೀವನಾವಶ್ಯಕ ವಸ್ತುಗಳ ಬೆಲೆಗಳು ವಿಪರೀತವಾಗಿ ಏರುತ್ತಿರುವುದರ ವಿರುದ್ಧ ಮೇ ೧೭ ರಂದು ದ. ಕನ್ನಡ ಜಿಲ್ಲೆಯಾದ್ಯಂತ ಕೈಗಾರಿಕಾ ಬಂದ್ ನಡೆಸಿ ಎಲ್ಲಾ ತಾಲ್ಲೂಕು ಕಛೇರಿಗಳ ಎದುರು ಮತ್ತು ಮಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿ ಮನವಿ ಅರ್ಪಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯು ನೀಡಿದ ಕರೆಯ ಅನ್ವಯ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿವೆ. ಅದರ ವಿವರಗಳನ್ನು ಕೆಳಗೆ ಕೊಡಲಾಗಿದೆ.

ಮಂಗಳೂರು

ಇತ್ತೀಚಿನ ದಿನಗಳಲ್ಲಿ ಎಲ್ಲಾ ಜೀವನಾವಶ್ಯಕ ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿವೆ. ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ, ಅಕ್ಕಿಯ ಬೆಲೆ ಕಿಲೋಗೆ ರೂ. 3–70ಕ್ಕಿಂತಲೂ ಹೆಚ್ಚಾಗಿದೆ. ಲಾಭಬಡುಕರೂ, ಅಕ್ರಮ ದಾಸ್ತಾನುಗಾರರೂ, ಕಾಳಸಂತೆಕೋರರೂ ಬಡಜನರನ್ನು ಕೊಳ್ಳೆ ಹೊಡೆಯುತ್ತಿದ್ದಾರೆ ರೇಷನ್ ಪದ್ಧತಿಯು ತೀರಾ ಅವ್ಯವಸ್ಥೆಯಿಂದ ಕೂಡಿದ್ದು, ಲಾಭಬಡುಕ ಶ್ರೀಮಂತ ವ್ಯಾಪಾರಿಗಳೂ ಭ್ರಷ್ಟಾಚಾರಿ ಅಧಿಕಾರಿಗಳೂ ತಪ್ಪೊಳಗೆ ಅಪವಿತ್ರ ಮೈತ್ರಿ ಮಾಡಿಕೊಂಡು ಪಡಿತರ ಪದ್ಧತಿಯನ್ನೇ ವಿಫಲಗೊಳಿಸಿ ಬೆಲೆ ಏರಿಕೆಯನ್ನು ಉಲ್ಬಣಗೊಳಿಸಿ ಜನಸಾಮಾನ್ಯರ ಜೀವನವನ್ನೇ ದುಸ್ತರವನ್ನಾಗಿ ಮಾಡಿದ್ದಾರೆ.

ಆದುದರಿಂದ ಸರ್ಕಾರ ಈ ಬಗ್ಗೆ ಕೂಡಲೇ ಎಚ್ಚರಗೊಂಡು ಜನರಿಗೆ ರೇಷನ್ ಮೂಲಕ ಎಲ್ಲಾ ಆಹಾರ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ಜನರಿಗೆ ಒದಗಿಸಬೇಕೆಂದೂ, ಪಟ್ಟಣ ಮತ್ತು ಹಳ್ಳಿಗಳೆಂಬ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ಪಡಿತರ ಪದ್ಧತಿ ಜಾರಿಯಾಗಬೇಕೆಂದೂ, ಸಗಟು ವ್ಯಾಪಾರವನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದೂ, ಅಕ್ರಮ ದಾಸ್ತಾನುಗಾರರನ್ನು ಕಾಳಸಂತೆಕೋರರನ್ನೂ ಅವರಿಗೆ ರಕ್ಷಣೆ ನೀಡುತ್ತಿರುವ ಅಧಿಕಾರಿಗಳನ್ನೂ ಪತ್ತೆ ಹಚ್ಚಿ ಶಿಕ್ಷೆ ನೀಡಬೇಕೆಂದೂ ಇವೇ ಮೊದಲಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಒತ್ತಾಯಪಡಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ನೀಡಿದ ಕರೆಯಂತೆ ದ. ಕನ್ನಡ ಜಿಲ್ಲೆಯಾದ್ಯಂತ ತಾಲ್ಲೂಕು ಕಛೇರಿಗಳ ಮತ್ತು ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯೆದುರು ಸಹಸ್ರಾರು ಜನರು ಸಾಮೂಹಿಕ ಸತ್ಯಾಗ್ರಹ ನಡೆಸಿ ಮನವಿ ಅರ್ಪಿಸಿದರು. ಸಿ.ಐ.ಟಿ.ಯುಗೆ ಸೇರಿರುವ ಜಿಲ್ಲೆಯ ಎಲ್ಲಾ ಕಾರ್ಮಿಕ ಸಂಘಟನೆಗಳೂ ಇದರಲ್ಲಿ ಪಾಲ್ಗೊಂಡು ಬಂದು ಯಶಸ್ವಿ ಬಹಿಷ್ಕಾರ ನಡೆಸಿದರು.

ಮಂಗಳೂರಿನಲ್ಲಿ ಬೆಳಗ್ಗೆ ಸಹಸ್ರಾರು ಕಾರ್ಮಿಕರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸತ್ಯಾಗ್ರಹ ನಡೆಸಿದರು. ಮಧ್ಯಾಹ್ನ 12 ಗಂಟೆಯಿಂದ 3ರ ತನಕ ನಗರದ ಎಲ್ಲಾ ಸಿಟಿ ಬಸ್‌ಗಳೂ ಸಂಪೂರ್ಣ ನಿಂತು ಬಸ್ ನೌಕರರು ಸತ್ಯಾಗ್ರಹಕ್ಕೆ ಬೆಂಬಲ ನೀಡಿದರು.

ಸಂಜೆ ಘಂಟೆ 3–30ಕ್ಕೆ ಕಾ|ಗಳಾದ ಪಿ. ರಾಮಚಂದ್ರ ರಾವ್, ಎಂ.ಎಲ್.ಎ., ಕೆ. ಆರ್. ಶ್ರೀಯಾನ್, ಕೆ. ಮುಸಬ್ಬ, ಯು. ಜನಾರ್ಧನ ನಾಯ್ಕ್ ಕಮಲಾಕ್ಷ ಬಂಗೇರ, ಯು. ಬಿ. ಲೋಕಯ್ಯ ಮೊದಲಾದವರಿಂದ ಶಿಷ್ಟ ಮಂಡಲಿಯು ಡೆಪ್ಯುಟಿ ಕಮಿಷನರವರಿಗೆ ಮನವಿ ಅರ್ಪಿಸಿದ ಬಳಿಕ ಜರಗಿದ ಸಭೆಯನ್ನುದ್ದೇಶಿಸಿ ಶಾಸಕರಾದ ಕಾ. ಪಿ. ರಾಮಚಂದ್ರರಾವ್‌ರವರು ಭಾಷಣ ಮಾಡಿದರು. ಕಾ. ಜನಾರ್ಧನ ನಾಯ್ಕರು ಸ್ವಾಗತಿಸಿದರು.

ಪಕ್ಷದ ದ.ಕ. ಜಿಲ್ಲಾ ಸಮಿತಿಯು ಕರೆಯಂತೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಹಸ್ರಾರು ಕಾರ್ಮಿಕರಿಗೂ ಪಕ್ಷದ ಕಾರ್ಯಕರ್ತರಿಗೂ, ಬೆಂಬಲ ನೀಡಿದ ಸಾರ್ವಜನಿಕರಿಗೂ ಅಭಿನಂದನೆ ನೀಡಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಶ್ರೀ ಕೆ. ಆರ್. ಶ್ರೀಯಾನರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಮತ್ತು ಸರ್ಕಾರ ಈ ಬಗ್ಗೆ ತುರ್ತು ಕ್ರಮ ವಹಿಸಿ ಜಿಲ್ಲೆಯ ಜನತೆಯ ಈ ಬೇಡಿಕೆಗಳನ್ನು ಈಡೇರಿಸಲು ಮುಂದಾಗಬೇಕೆಂದೂ, ಆಹಾರ ಪರಿಸ್ಥಿತಿ ಇನ್ನೂ ಬಿಗಡಾಯಿಸುವ ಮೊದಲೇ ಎಚ್ಚರಗೊಳ್ಳಬೇಕೆಂದೂ ಒತ್ತಾಯಿಸಿದ್ದಾರೆ.

ಉಡುಪಿ

ಉಡುಪಿಯಲ್ಲಿ ಬೆಲೆಯೇರಿಕೆಯನ್ನು ವಿರೋಧಿಸಿ ಸಾಮೂಹಿಕ ಧರಣಿ ಸತ್ಯಾಗ್ರಹವನ್ನು ತಾಲ್ಲೂಕು ಕಛೇರಿ ಮುಂದೆ ನಡೆಸಲಾಯಿತು. ಸುಮಾರು 300 ಕ್ಕೂ ಮಿಕ್ಕಿದ ಕಾರ್ಮಿಕರೂ ರೈತರೂ ಜತೆಯಾಗಿ ಪಾರ್ಟಿ ಆಫೀಸಿನಿಂದ ಮೆರವಣಿಗೆ ಹೊರಟು ತಾಲ್ಲೂಕು ಕಛೇರಿ ಬಳಿಗೆ ಹೋಗಿ ಬೆಳಗ್ಗೆ 10–30 ರಿಂದ ಸಂಜೆ 5 ಗಂಟೆಯ ವರೆಗೆ ಸತ್ಯಾಗ್ರಹ ನಡೆಸಿದರು. ಸಂಜೆಗೆ ನಿಯೋಗವೊಂದು ತಾಲ್ಲೂಕು ತಹಶೀಲ್ದಾರರನ್ನು ಭೆಟ್ಟಿಯಾಗಿ ಹಳ್ಳಿ ಮತ್ತು ನಗರಗಳಲ್ಲಿ ಒಂದೇ ರೀತಿಯಾಗಿ ಜೀವನಾವಶ್ಯಕ ವಸ್ತುಗಳನ್ನು ರೇಶನ್ ಮೂಲಕ ವಿತರಣೆ ಮಾಡಬೇಕು. ಸಗಟು ವ್ಯಾಪಾರವನ್ನು ಸರಕಾರ ಸ್ವಾಧೀನ ಪಡಿಸಿ ರೈತರ ಮತ್ತು ಜನತೆಯ ಸುಲಿಗೆಯನ್ನು ನಿಲ್ಲಿಸುವಂತೆ, ಏರುತ್ತಿರುವ ಬೆಲೆಗಳನ್ನು ತಗ್ಗಿಸಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕು, ಎಂಬಿವೇ ಮೊದಲಾದ ಕೇಳಿಕೆಗಳಿರುವ ಮನವಿಯೊಂದನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಡುವಂತೆ ಒಪ್ಪಿಸಲಾಯಿತು.

ಸಂಜೆ 5ರ ನಂತರ ಪ್ರಚಂಡ ಮೆರವಣಿಗೆಯು ಗಗನಭೇರಿ ಘೋಷಣೆಗಳೊಡನೆ ನಗರದಲ್ಲಿ ಸುತ್ತಾಡಿ ಉಡುಪಿ ರಥಬೀದಿಗೆ ಬಂದು, ಕಾ|| ಡೇವಿಡ್ ಎ. ಕರ್ಕಡರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಜರುಗಿತು. ಕಾಂ| ಎಚ್. ವಿಠಲರವರು ಮಾತನಾಡಿ ಬೆಲೆ ಏರಿಕೆಯನ್ನು ತಡೆಗಟ್ಟಲು ಸರಕಾರ ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಮುಂದಾಗಬೇಕೆಂದು ಒತ್ತಾಯಿಸಿದರು.

ಪ್ರಾರಂಭದಲ್ಲಿ ರಾಮ ಕೆ. ಕುಂದರರು ಸ್ವಾಗತಿಸಿದರು.

ಕುಂದಾಪುರ

ತಾರೀಕು 17–5–1983 ರಂದು ಬೆಲೆ ಏರಿಕೆಯ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ತಾಲೂಕು ಕಛೇರಿಗಳ ಮುಂದೆ ನಡೆಯುವ ಸಾಮೂಹಿಕ ಧರಣಿ ಸತ್ಯಾಗ್ರಹದ ಕಾರ್ಯಕ್ರಮದ ಅಂಗವಾಗಿ ಕುಂದಾಪುರದಲ್ಲಿ ಹಂಚಿನ ಕಾರ್ಮಿಕರು ಕೈಗಾರಿಕಾ ಬಂದ್ ನಡೆಸಿ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆಯಿಂದ ತಾಲ್ಲೂಕು ಕಛೇರಿಗೆ ಬಂದು ಮನವಿಯೊಂದನ್ನು ಅರ್ಪಿಸಿದರು.

ಅಕ್ಕಿ ಮತ್ತು ಇತರ ಆಹಾರ ಧಾನ್ಯಗಳು, ತೆಂಗಿನೆಣ್ಣೆ, ಮತ್ತಿತರ ಖಾದ್ಯ ತೈಲಗಳು, ಸಕ್ಕರೆ, ಸೀಮೆಎಣ್ಣೆ ಇತ್ಯಾದಿ ಎಲ್ಲಾ ಜೀವನಾವಶ್ಯಕ ವಸ್ತುಗಳನ್ನು ರೇಶನ್ ಮೂಲಕ ಕಡಿಮೆ ಬೆಲೆಯಲ್ಲಿ, ಹೆಚ್ಚಿನ ಪ್ರಮಾಣದಲ್ಲಿ ಹಳ್ಳಿ–ಪಟ್ಟಣ ಭೇದವಿಲ್ಲದೆ ಎಲ್ಲರಿಗೂ ವಿತರಣೆ ಮಾಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಅವಕಾಶ ಸಿಕ್ಕಿದಾಗೆಲ್ಲ ಅತ್ಯಾವಶ್ಯಕ ವಸ್ತುಗಳ ಬೆಲೆ ಹೆಚ್ಚಿಸುವ, ಅಕ್ಕಿಯನ್ನು ಬಚ್ಚಿಟ್ಟು ಜನರು ಉಪವಾಸ ಬೀಳುವಂತೆ ಮಾಡುವ ಸಮಾಜದ್ರೋಹಿಗಳಿಗೆ ಶಿಕ್ಷಿಸಲು ಒತ್ತಾಯಿಸಲಾಗಿದೆ. ಜನತಾ ಸರಕಾರ ರೇಶನ್ ಅಂಗಡಿಗಳಿಗೆ ಸಾಕಷ್ಟು ಅಕ್ಕಿ ಪೂರೈಸಿ, ವಿತರಣೆ ವ್ಯವಸ್ಥೆಯನ್ನು ಸರಿಪಡಿಸುವುದರೊಂದಿಗೆ ಇದರ ದುರುಪಯೋಗ ಮಾಡಿಕೊಂಡು ವ್ಯಾಪಾರಸ್ಥರು ಅಕ್ಕಿಯ ಬೆಲೆ ಹೆಚ್ಚಿಸದಿದ್ದ ಹಾಗೆ ಕ್ರಮ ಕೈಗೊಳ್ಳಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಒತ್ತಾಯಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ ಹೋದಲ್ಲಿ ಎಲ್ಲಾ ವಿಭಾಗದ ಜನರೊಂದಿಗೆ ತೀವ್ರ ಹೋರಾಟವನ್ನು ಮಾಡಬೇಕಾದೀತು. ಎಂದು ಎಚ್ಚರಿಸಲಾಗಿದೆ.

ಬಂಟ್ವಾಳ

ಇತ್ತೀಚಿನ ದಿನಗಳಲ್ಲಿ ಜೀವನವಶ್ಯಕ ವಸ್ತುಗಳ ಬೆಲೆಗಳು ವಿಪರೀತ ಏರತೊಡಗಿದೆ. ಅಕ್ಕಿ ಬೆಲೆ ಕಿಲೋಗೆ ರೂಪಾಯಿ 3–70ಕ್ಕೂ ಮಿಕ್ಕಿದೆ. ಹೀಗೆಯೇ ಪರಿಸ್ಥಿತಿ ಮುಂದುವರಿದಲ್ಲಿ ಮಳೆಗಾಲದಲ್ಲಿ ಜನರು ಉಪವಾಸ ಬೀಳುವಂತಾಗಬಹುದು. ರೇಷನ್ ವ್ಯವಸ್ಥೆಯು ತೀರ ಅವ್ಯವಸ್ಥೆಯಿಂದ ಕೂಡಿದ್ದು ಜನರ ಸಂಕಷ್ಟಕ್ಕೆ ಯಾವುದೇ ಪರಿಹಾರವನ್ನು ಒದಗಿಸುವುದರಲ್ಲಿ ರಾಜ್ಯ ಸರಕಾರ ವಿಫಲವಾಗಿರುವುದರಿಂದ ಜಿಲ್ಲೆಯ ಸಿ.ಪಿ.ಐ. (ಎಂ) ಪಕ್ಷದ ಜಿಲ್ಲಾ ಸಮಿತಿ ಬೆಲೆ ಏರಿಕೆಯನ್ನು ವಿರೋಧಿಸಿ ಚಳುವಳಿ ನಡೆಸಲು ಕೊಟ್ಟ ಕರೆಗನುಸಾರವಾಗಿ ಬೆಲೆ ಏರಿಕೆಯನ್ನು ತಡೆಗಟ್ಟಿ ಪಡಿತರ ಕಾರ್ಡುಗಳಲ್ಲಿ ಜೀವನಾವಶ್ಯಕ ಸಾಮಗ್ರಿಗಳನ್ನು ಹಳ್ಳಿ ಪಟ್ಟಣಗಳೆಂಬ ಭೇದವಿಲ್ಲದೆ ಯೋಗ್ಯ ಬೆಲೆಯಲ್ಲಿ ವಿತರಣೆ ಮಾಡಬೇಕು. ಕಾಲಸಂತೆಕೋರರನ್ನು ಶಿಕ್ಷಿಸಬೇಕು. ಕೇಂದ್ರ ಸರಕಾರದ ಗಂತ್ರೆದಾರಿ ಬಂಡವಾಳಶಾಹಿ ಪರ ನೀತಿಗೆ ಧಿಕ್ಕಾರ ಎಂಬ ಘೋಷಣೆಗಳನ್ನು ಕೂಗುತ್ತಾ ಪೇಟೆಯಲ್ಲಿ ಮೆರವಣಿಗೆ ನಡೆಸಿ ಬಂಟ್ವಾಳ ತಾಲ್ಲೂಕು ತಹಶೀಲ್ದಾರರ ಕಛೇರಿಯ ಮುಂದುಗಡೆ, ತಾಲೂಕಿನ ವಿವಿದೆಡೆಗಳಿಂದ ಬಂದ ರೈತರು ಕಾರ್ಮಿಕರು ಮತ್ತು ತಲೆ ಹೊರೆ ಮಜೂರರು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿದರು.

ಧರಣಿ ಸತ್ಯಾಗ್ರಹದಲ್ಲಿ ಸ್ತ್ರೀ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಈ ಕಾರ್ಯಕ್ರಮವನ್ನು ಸಿ.ಪಿ.ಐ. (ಎಂ) ಪಕ್ಷದ ತಾಲ್ಲೂಕು ಸಮಿತಿ ಸಂಘಟಿಸಿ ಬೇಡಿಕೆಗಳ ಮನವಿಯನ್ನು ತಾಲ್ಲೂಕು ತಹಸೀಲ್ದಾರರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳವರಿಗೆ ಸಲ್ಲಿಸಿತು.

ತಾಲ್ಲೂಕು ಸಮಿತಿಯ ಪಕ್ಷದ ಕಾರ್ಯದರ್ಶಿ ಕಾಂ. ವಾಸು ಗಟ್ಟಿ ಮಾತನಾಡುತ್ತಾ ಇಂದಿನ ಬೆಲೆ ಏರಿಕೆಯ ನೀತಿಯನ್ನು ವಿವರಿಸಿದರು.

ಪುತ್ತೂರು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ.ಕನ್ನಡ ಜಿಲ್ಲಾ ಸಮಿತಿಯ ಆದೇಶದನ್ವಯ ತಾ|| 17–5–1983 ರಂದು ಪುತ್ತೂರು ತಾಲ್ಲೂಕು ಕಚೇರಿ ಎದುರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪುತ್ತೂರು ತಾಲ್ಲೂಕು ಸಮಿತಿಯು ಧರಣಿ ಸತ್ಯಾಗ್ರಹ ನಡೆಸಿತು.

ಸಾಧಾರಣ 150ಕ್ಕಿಂತಲೂ ಹೆಚ್ಚು ಸ್ತ್ರೀ ಪುರುಷ ಪಕ್ಷದ ಕಾರ್ಯಕರ್ತರು ಪುತ್ತೂರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿದರು. ಬೆಲೆ ಇಳಿಸಿ ಬಡವರನ್ನು ಉಳಿಸಿ, ಪುತ್ತೂರು ನಗರಕ್ಕೆ ಕೂಡಲೇ ನಲ್ಲಿ ನೀರಿನ ಸರಬರಾಜು ಮಾಡಿರಿ. ನ್ಯಾಯ ಅಂಗಡಿಯ ಮೂಲಕ ಆಹಾರವನ್ನು ವಿತರಿಸಿ ಮೊದಲಾದ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಸಾಗಿತು. ತಾಲ್ಲೂಕು ಕಚೇರಿಯೆದುರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಮೆರವಣಿಗೆಯ ನೇತೃತ್ವವನ್ನು ಪಕ್ಷದ ಕಾರ್ಯದರ್ಶಿ ಕಾ. ಬಿ. ರಾಮಕೃಷ್ಣ ಮತ್ತು ರೈತ ಸಂಘದ ಅಧ್ಯಕ್ಷ ಕಾ. ತಂಬನ್‌ರವರು ವಹಿಸಿದರು.

ಮುಖ್ಯ ಬೇಡಿಕೆಗಳು : ಏರುತ್ತಿರುವ ಬೆಲೆಗಳಿಗೆ ನಿಯಂತ್ರಣ ಹಾಕಿ ಜನಸಾಮಾನ್ಯರಿಗೆ ನ್ಯಾಯ ಅಂಗಡಿಯ ಮೂಲಕ ಅಕ್ಕಿ ಸಕ್ಕರೆ ಸೀಮೆಎಣ್ಣೆ ಮೊದಲಾದವುಗಳನ್ನು ವಿತರಿಸಬೇಕು. ಬರಗಾಲ ಪೀಡಿತ ಪ್ರದೇಶದ ಜನರಿಗೆ ಪರಿಹಾರವನ್ನು ಕೂಡಲೇ ಒದಗಿಸಬೇಕು. ಪುತ್ತೂರು ನಗರಕ್ಕೆ ಕುಡಿಯುವ ನಲ್ಲಿ ನೀರಿನ ಯೋಜನೆಯನ್ನು ಕೂಡಲೇ ಆರಂಭಿಸಬೇಕು. ಪುತ್ತೂರಿನ ಬೊಳ್ವಾರ್–ಹಾರಾಡಿ ಪ್ರದೇಶದಲ್ಲಿ ಸರ್ಕಾರಿ ಮಾಲಿಕತ್ವದ ಸೌದೆ ಡಿಪೋವನ್ನು ಆರಂಭಿಸಬೇಕು.

ಸರ್ಕಾರಿ ಭೂಮಿಯನ್ನು ಆಕ್ರಮಿಸಿ ಅರ್ಜಿ ಮಾಡಿರುವ ಭೂರಹಿತರಿಗೆ ಕೂಡಲೇ ಹಕ್ಕು ಪತ್ರಗಳನ್ನು ನೀಡಬೇಕು. ಇವೇ ಮೊದಲಾದ ಬೇಡಿಕೆಗಳಿರುವ ಮನವಿಯನ್ನು ಒಪ್ಪಿಸಲಾಯಿತು. ತಹಸಿಲ್ದಾರರವರು ಧರಣಿ ಸತ್ಯಾಗ್ರಹ ನಡೆಸುವಲ್ಲಿಗೆ ಬಂದು ಮನವಿಯನ್ನು ಪಡೆದು ಸೂಕ್ತ ಭರವಸೆ ನೀಡಿದರು.

ಕರ್ನಾಟಕದಲ್ಲಿ ದಲಿತ ಚಳವಳಿಗಳು ಮತ್ತು ವರ್ಗ ಹೋರಾಟದ ಮಹತ್ವ :

— ಎಸ್. ಎಸ್. ಹಿರೇಮಠ್

ದಲಿತರ ಮೇಲಾಗುವ ಅನ್ಯಾಯ, ದಬ್ಬಾಳಿಕೆಗಳ ಘಟನೆಗಳನ್ನು ಅರಿಯುವುದು, ಅದಕ್ಕೆ ಸಂಘಟಿತ ಹೋರಾಟದ ರೂಪ ಕೊಡುವುದು, ಕರ್ನಾಟಕದ ದಲಿತರ ಸಂಘಟನೆಗಳಲ್ಲಿ ಉದ್ಭವಿಸಿ ಕಂಡು ಬಂದ ಮುಖ್ಯ ಪ್ರವೃತ್ತಿಯಾಗಿದೆ. ದಾಸನಪುರದ ಚಿಕ್ಕತಿಮ್ಮಯ್ಯನ, ಕೋಲಾರ ಜಿಲ್ಲೆಯ ಅನಸೂಯಮ್ಮನ ಪ್ರಸಂಗಗಳನ್ನು ನೋಡಬಹುದು. ದಲಿತರು ತೀವ್ರ ಶೋಷಣೆಗೆ ತುತ್ತಾಗಿ ಸತ್ತುಹೋದಾಗ ಅಥವಾ ಹೆಂಗಸರು ಮಾನಭಂಗಿತರಾದಾಗ ದಲಿತರಲ್ಲಿಯ ಈ ಸಂಬಂಧದ ರೊಚ್ಚನ್ನು ಪ್ರತಿಭಟನೆಯ ರೂಪದಲ್ಲಿ ಸಂಘಟನೆಯಾಗಿ ಬೆಳೆಸಲು ಯತ್ನಿಸಿದ ಹಲವು ಪ್ರಸಂಗಗಳಿವೆ. ಆದರೆ ಯಾವಾಗಲೂ ಹೀಗೆ ಆಗಿದೆ, ಮತ್ತು ಹೀಗೆ ಆಗಬೇಕೆಂದೇನೂ ಅಲ್ಲ. ಹೋರಾಟಕ್ಕಿರುವ ಸೈದ್ಧಾಂತಿಕ ತಿಳುವಳಿಕೆಯೇ ಆಯಾ ಸಂಘಟನೆಯ ಚಟುವಟಿಕೆಗಳನ್ನು ನಿಯಂತ್ರಿಸುವುದರಿಂದ ಈ ರೀತಿ ಯಾಕಾಗುತ್ತದೆಂಬುದನ್ನು ಅರಿಯಬಹುದು. ಅನೇಕ ಸಲ, ವರ್ಗ ಶೋಷಣೆ ಮತ್ತು ವರ್ಗ ಹೋರಾಟಕ್ಕಿಂತ ಜಾತಿ ಶೋಷಣೆಯ ಆಧಾರದಿಂದ ಅದನ್ನೆ ಪ್ರಮುಖ ಮಾಡಿ ಸಂಘಟಿಸಿದ್ದು ಕಂಡು ಬಂದಿದೆ. ಒಟ್ಟಾರೆ ಇದೆಲ್ಲವೂ; ವರ್ಗ ಹೋರಾಟದಿಂದ ಎಲ್ಲರೂ ಆಶಿಸುವ ಶೋಷಣಾ ರಹಿತ ಸಮಾಜ ನಿರ್ಮಾಣ ಸಾಧ್ಯವೆ ಅಥವಾ ಜಾತಿ ಹೋರಾಟದಿಂದಲೇ ಎಂಬ ಚರ್ಚೆಗೆ ಎಡೆಮಾಡಿದೆ.

ದಲಿತ ಸಂಘಟನೆಗಳಲ್ಲಿಯ ಅನೇಕರು ಎಲ್ಲ ಜಾತಿಯ ಬಡವರು, ಶೋಷಿತರು, "ದಲಿತರೆಂದೂ", ಅವರ ಸಮಸ್ಯೆಗಳ ಆಧಾರದಿಂದ ಅವರನ್ನೆಲ್ಲ ಸಂಘಟಿಸಬೇಕೆಂದೂ ಹೇಳುವರು. ಆದರೆ ವಿಶೇಷವಾಗಿ ಕಂಡು ಬರುವ ಸಾಮಾನ್ಯ ಕ್ರಮವೂ ಧೋರಣೆಯೂ ಏನೆಂದರೆ ಹೆಚ್ಚಾಗಿ ಎಲ್ಲ ಕೆಳಜಾತಿಯ ಬಡವರನ್ನು ಮಾತ್ರ ಸಂಘಟಿಸಲು ಯತ್ನಿಸಿದ್ದು. ಮೇಲ್ಜಾತಿಯ ಪಟ್ಟಿಗೆ ಸೇರುವ ಲಿಂಗಾಯತರು, ಬ್ರಾಹ್ಮಣರು ಮುಂತಾದ ಜಾತಿಗಳ ಶೋಷಿತರನ್ನು (ಎಲ್ಲೋ ಕೆಲ ವ್ಯಕ್ತಿಗಳನ್ನು ಬಿಟ್ಟರೆ) ಈ ಸಂಘಟನೆಗಳು ಒಳಗೊಳ್ಳಲಿಲ್ಲ. ಹಾಗಾದರೆ ಎಲ್ಲಾ ಜಾತಿಯ ಶೋಷಿತರು 'ದಲಿತರು' ಎಂದು ಹೇಳುವಲ್ಲಿ ಅರ್ಥ ಏನುಳಿಯಿತು? ಹೀಗಾಗಿ ಶೋಷಿತರೆಲ್ಲರ ವಿಶಾಲ ವೇದಿಕೆ ರಚಿಸುವಲ್ಲಿ ತೀವ್ರ ಮಿತಿಗಳುಂಟಾದವು ಈ ಸಂಘಟನೆಗಳಿಗೆ. ಹೀಗೆ ಈ ಸಂಘಟನೆಗಳು ಯೋಜಿಸಲು, ಯೋಚಿಸಲು ಸಕಾರಣಗಳಿರುವುದೇನೊ ನಿಜವೇ. ಅದೆಂದರೆ ಮೇಲ್ಜಾತಿಗಳ ಶೋಷಿತರೂ ಕೂಡ ಕೆಳಜಾತಿಯ ಶೋಷಿತರನ್ನು ಕೀಳಾಗಿ, (ಸಾಮಾಜಿಕವಾಗಿ) ಕಾಣುವರೆಂಬುದೇ ಆಗಿದೆ. ಈ ಶೋಷಣೆಯನ್ನು ಸಮರ್ಥಿಸುವ ಪ್ರಶ್ನೆಯೇ ಇಲ್ಲ. ಆದರೆ ಈ ಸಮಸ್ಯೆಯಲ್ಲದೆ, ಎಲ್ಲ ಸಮಸ್ಯೆಗಳಿಗೂ (ಇವೆಲ್ಲ ಸಮಸ್ಯೆಗಳಿಗೆ ಒಳಸಂಬಂಧಗಳುಂಟು) ಸಮರ್ಥವಾದ ವೈಜ್ಞಾನಿಕ ಸಿದ್ಧಾಂತ ಮತ್ತು ಹೋರಾಟದ ದಾರಿ ಯಾವುದು ಎಂಬುದನ್ನೇ ಅರಿಯಬೇಕಾಗಿರುವುದು. ಅಂದರೆ ಒಟ್ಟು ಕ್ರಾಂತಿಕಾರಿ ಸಿದ್ಧಾಂತದ ಹಿನ್ನೆಲೆಯಲ್ಲಿ ಈ ತಿಳುವಳಿಕೆ ಎಷ್ಟು ಸಮಂಜಸ ಎಂದು ಅರಿಯಬೇಕಾಗಿದೆ. ಏಕೆಂದರೆ ದೇಶದ ಎಲ್ಲ ರೀತಿಯ ಸಮಸ್ಯೆಗಳಿಗೂ ವೈಜ್ಞಾನಿಕ ಸಿದ್ಧಾಂತದ ಆಧಾರದಲ್ಲಿ ಕಣ್ಣೋಟ ಒದಗಿಸುವ ಅನುಭವಗಳಿಂದ ನುರಿತಿರುವ ಜನತೆಯ ಕ್ರಾಂತಿಕಾರಿ ರಾಜಕೀಯ ಪಕ್ಷಕ್ಕೆ ಸೇರಿದ ಹಲವರು ಈ ದಲಿತ ಸಂಘಟನೆಗಳಿಗೆ ಆಕರ್ಷಕರಾಗಿದ್ದಾರೆ. ಮತ್ತು ಈಗಲೂ ತಪ್ಪಾಗಿ ಕೆಲಸ ಮಾಡುತ್ತಿರುವ ಸ್ಥಿತಿಗೆ ಒಳಗಾಗಿದ್ದಾರೆ.

1982ರ ವಿಜಯವಾಡ "ರಾಜಕೀಯ ಸಂಘಟನಾತ್ಮಕ ವರದಿ" ಕರ್ನಾಟಕದ ಸ್ಥಿತಿಯ ಬಗ್ಗೆ ವಿವೇಚಿಸುತ್ತ ಈ(ಪುಟ 138-143)ಮಹತ್ವದ ಮಾತುಗಳನ್ನಾಡಿದೆ.

"ಸಾಮಾಜಿಕ, ಸಾಂಸ್ಕೃತಿಕ ಹಾಗೂ ತೀವ್ರ ಪುರೋಗಾಮಿ ರಾಜಕೀಯವೂ ಕೂಡ ಹಿಂದುಳಿದ ವರ್ಗಗಳ ಬೇಡಿಕೆಗಳ ಸ್ವರೂಪ ಪಡೆಯುತ್ತಿದೆ. ಪ್ರಗತಿಪರರೆಂದು ಕರೆದುಕೊಳ್ಳುವ ದೇವರಾಜ ಅರಸುರಂತಹ ನಾಯಕರೂ ಸಹ ಹಿಂದುಳಿದ ವರ್ಗಗಳ ಚಳುವಳಿ ಮತ್ತು ಬೇಡಿಕೆಗಳನ್ನು 'ವರ್ಗ ಹೋರಾಟ'ದೊಂದಿಗೆ ಸಮೀಕರಿಸುತ್ತಾರೆ.

ಇದರಿಂದಾಗಿ ತೋರಿಕೆಗಾಗಿ 'ಎಡ' ಎಂದು ಕರೆದುಕೊಳ್ಳುವ ಕ್ರಿಶ್ಚಿಯನ್ ಮತ್ತು ದಲಿತರ ಚಟುವಟಿಕೆಗಳಂತವುಗಳಿಗೆ ಹುಟ್ಟಲು ಮತ್ತು ಬೆಳೆಯಲು ಫಲವತ್ತಾದ ಪರಿಸ್ಥಿತಿ ನಿರ್ಮಾಣಗೊಂಡಿದೆ."

ಮತ್ತು

"ಜಲಂಧರ್ ಮತ್ತು ಸಾಲ್ಕಿಯಾ ನಿರೂಪಣೆಯಂತೆ ಎಡ ಮತ್ತು ಪ್ರಜಾಪ್ರಭುತ್ವ ಐಕ್ಯತೆಯನ್ನು ಸಾಧಿಸುವ ಮತ್ತು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ಕಾರ್ಯ ಕೈಗೂಡಬೇಕಾದರೆ ಬಂಡವಾಳಶಾಹಿ–ಭೂಮಾಲಕ ವರ್ಗದ ರಾಜಕೀಯ ಪಕ್ಷಗಳ ಹಾಗೂ ಗುಂಪುಗಳ ಬಹಿರಂಗವಾಗಿಯೇ ಸಂಕುಚಿತ ದೃಷ್ಟಿಹೊಂದಿರುವ ಸಿದ್ಧಾಂತಗಳನ್ನೂ ಹಾಗೆಯೇ ಕೆಲವು ಕ್ರಿಶ್ಚಿಯನ್ ಗುಂಪುಗಳ, ದಲಿತರ ಹಾಗೂ ನಕ್ಸಲೀಯರ "ಎಡ" ಎಂದು ತೋರಿಸಿಕೊಳ್ಳುವ ಸಿದ್ಧಾಂತಗಳನ್ನು ಬಯಲಿಗೆಳೆದಾಗ ಮಾತ್ರ ಸಾಧ್ಯ"

(ಪುಟ : 138)

ವಿಜಯವಾಡಾ ಸಮ್ಮೇಳನ ಗುರುತಿಸಿದ ಹಲವಾರು ಅಪಾಯಗಳು ಅನೇಕ ರೀತಿಯಲ್ಲಿ ಆಗಿವೆ. ಕರ್ನಾಟಕದಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಚ್ಚು ಪ್ರಚಾರದಲ್ಲಿರುವ, ಮತ್ತು ಕೆಲಸ ಮಾಡುತ್ತಿರುವ ಪ್ರಮುಖ ಸಾಂಸ್ಕೃತಿಕ ಸಂಘಟನೆಗಳಲ್ಲಿಯ ಮಾರ್ಕ್ಸ್‌ವಾದಿಗಳು, ಈ ಅಪಾಯಗಳಿಗೆ ಸಿಲುಕಿದ್ದಾರೆ. ಅದು ಅವರ ಸಾಹಿತ್ಯ ಕೃತಿಗಳಲ್ಲಲ್ಲದೆ ಗೋಕಾಕ್ ಚಳುವಳಿಯಲ್ಲೂ ಕಂಡುಬಂದಿತು.

ಕರ್ನಾಟಕದಲ್ಲಿ ಮೇಲಿಂದ ಮೇಲೆ ನಡೆಯುತ್ತಿರುವ ಜಾತಿ ಸಮ್ಮೇಳನಗಳು, (ಬ್ರಾಹ್ಮಣರ ಮಹಾ ಸಮ್ಮೇಳನ, ವಾಲ್ಮೀಕಿಗಳ ಸಮ್ಮೇಳನ, ಲಿಂಗಾಯತರದ್ದು ಮುಂತಾಗಿ ಪ್ರತಿಯೊಂದು ಜಾತಿಯೂ ತನ್ನದೇ ಆದ ಸಮ್ಮೇಳನಗಳನ್ನು ಸಂಘಟಿಸುತ್ತಿವೆ) ಈಚೆಗೆ ಡಾ|| ಅಂಬೇಡ್ಕರ್ ಅವರ ಪತ್ನಿಯವರ ಪ್ರವಾಸ ಮತ್ತು ಭಾಷಣಗಳು ಮುಂತಾದ ಘಟನೆಗಳನ್ನು ಪರಾಮರ್ಶಿಸಬೇಕು (ವಿಜಯವಾಡಾ ರಿಪೋರ್ಟಿನ ಹಿನ್ನಲೆಯಲ್ಲಿ).

ಜಾತಿಯ ಕಟ್ಟುಪಾಡುಗಳು, ವಿಧಿ ವಿಧಾನಗಳು, ಎಲ್ಲ ಮೇಲ್ಜಾತಿ ಮತ್ತು ಕೆಳಜಾತಿಗಳನ್ನು ಆಕ್ರಮಿಸಿರುವುದರಲ್ಲಿಯ ಅಪಾಯವನ್ನು ಗುರುತಿಸದೇ [ಎಲ್ಲ ಜಾತಿಗಳ ವಿಧಿ, ಕಟ್ಟುಪಾಡುಗಳು, ಅವರಿಗೇನೇ ಪ್ರತಿಗಾಮಿಯೂ, ಮುಳುವಾಗಿಯೂ ಪರಿಣಮಿಸಿವೆ.] ಶೋಷಿತರಲ್ಲೇ ವಿಭಾಗಗಳನ್ನು ಮಾಡಿ, ಒಂದೆರಡು ವಿಭಾಗಗಳನ್ನು ನಿರ್ಲಕ್ಷಿಸುವುದು ಸರಿಯೇ? ಖಂಡಿತ ತಪ್ಪು. ಹಾಗೆ ನೋಡಿದರೆ ಎಲ್ಲ ಜಾತಿಯವರಿಗಿಂತ ಸಾಮಾಜಿಕವಾಗಿ ಹೆಚ್ಚು ಮತ್ತು ಕಟ್ಟಕಡೆಯ ಶೋಷಣೆಗೆ ಒಳಗಾದವರನ್ನಷ್ಟೇ 'ದಲಿತರೆಂದು' ನಿಜ ಶೋಷಿತರೆಂದು ಅವರನ್ನಷ್ಟೇ ಸಂಘಟಿಸುವ ಸ್ಥಿತಿಗೆ ಇಳಿಯಬೇಕಾಗುವುದಿಲ್ಲವೇ? ಎಲ್ಲ ಶೋಷಿತರನ್ನು ಶ್ರೇಣಿಕರಿಸಿ ಶೋಷಿಸುವ ವಿಧಾನವೇ ಮೇಲ್ವರ್ಗದವರದಾಗಿತ್ತು. ಅದನ್ನೇ ಈ ದಲಿತ ಸಂಘಟನೆಗಳು ಮತ್ತೊಂದು ರೀತಿಯಲ್ಲಿ ಮಾಡಿದಂತಾದೀತು. ಹೊಲೆಯರು, 'ಢಕಲೇರು' ಎಂಬ ಒಂದು ಜಾತಿಯವರನ್ನು ಅಸ್ಪೃಶ್ಯರೆಂದು ಕಾಣುತ್ತಾರೆ. ತಳವಾರರು, ಕುರುಬರು, ಮುಂತಾದ ಕೆಳಜಾತಿಯವರು ಹೊಲೆಯರನ್ನು ಕೀಳಾಗಿ ಕಾಣುತ್ತಾರೆ. ತಳವಾರರು, ಕುರುಬರು ಮುಂತಾದವರನ್ನು ಲಿಂಗಾಯತರು, ಲಿಂಗಾಯತರನ್ನು ಬ್ರಾಹ್ಮಣರೂ, ಬ್ರಾಹ್ಮಣರಲ್ಲೇ ಸ್ಮಾರ್ತರನ್ನು ವೈಷ್ಣವರು (ವೈಷ್ಣವರು ಸ್ಮಾರ್ತರನ್ನು ಮಧ್ಯಾಹ್ನ ಹೊಲೆಯರೆಂದು ಕರೆಯುತ್ತಾರೆ.) ಹೀಗೆ ಸಾಮಾಜಿಕ ಮೇಲು-ಕೀಳೆಂಬ ಶ್ರೇಣೀಕರಣ ಇದೆಯಲ್ಲ? ಹೊಲೆಯರ ಜತೆ ಉಳಿದ ಕೆಳಜಾತಿಯವರನ್ನು (ಬೇಡರು, ಕುರುಬರು, ಮುಂತಾದವರು) ಒಂದು ದಲಿತ ಸಂಘಟನೆಯಲ್ಲಿ ಜಾತಿ ಆಧಾರದಿಂದ ಸಂಘಟಿಸಲು ಎಷ್ಟು ತೊಂದರೆಗಳಾಗಿಲ್ಲ? ಅನೇಕ ಸಲ ಇದು ಅಸಾಧ್ಯವೇ ಆಗಿದೆ. ಪ್ರದೇಶ ಪ್ರದೇಶಕ್ಕೊಂದು ವಿಧದಲ್ಲಿ ಈ ಸಮಸ್ಯೆಗೆ ಪರಿಹಾರ ಕಾಣಲು ಯತ್ನಿಸಲಾಗಿದೆ. ಒಂದೇ ಜಾತಿಯ ಅನೇಕ ಪಂಗಡಗಳನ್ನೆ ಸಂಘಟಿಸಲು —ಜಾತಿಯನ್ನು ಮುಂದು ಮಾಡಿದಾಗ—ಸಾಧ್ಯವಾಗುವುದೇ ?

ಹೀಗಾಗಿ ದಲಿತ ಸಂಘಟನೆಗಳು "ಎಲ್ಲಾ ಜಾತಿಯ ಶೋಷಿತರು" ಸಂಘಟನೆಯ ಒಳಗೆ ಬರುತ್ತಾರೆಂಬ ಸಾಮಾನ್ಯ ಧೋರಣೆಯನ್ನು ಅಂಗೀಕರಿಸಿದ್ದರೂ ಕೂಡ ಬರಿ ಹೊಲೆ-ಮಾದಿಗರನ್ನು ಮಾತ್ರ ಹೆಚ್ಚಾಗಿ ಸಂಘಟಿಸುವ ಸ್ಥಿತಿಗೆ ಸಿಲುಕಿರುವುದು ಕಾಣುತ್ತದೆ.

ಕ್ರೂರ ಹಿಂದೂ ಸಮಾಜ ವ್ಯವಸ್ಥೆ 'ಜಾತಿ' ಯನ್ನು ಅತ್ಯದ್ಭುತ ರೀತಿಯಲ್ಲಿ ಶೋಷಕ ಸಾಧನವಾಗಿ ಬಳಸಿಕೊಂಡಿದೆ. ಸಾಧ್ಯವಾದಷ್ಟು ವಿಧದಲ್ಲಿ, ಸಂಖ್ಯೆಯಲ್ಲಿ, ಒಡೆದು ಇಡೀ ದುಡಿಯುವ ಜನತೆಯನ್ನು ಛಿದ್ರಗೊಳಿಸಿ, ಅವರೆಲ್ಲರ ಮಧ್ಯೆ ಎಂದೆಂದೂ ಒಂದಾಗದ ಪದ್ಧತಿಗಳು, ಸಂಪ್ರದಾಯಗಳು ರೂಢಿ, ಪರಂಪರೆಗಳನ್ನು, ಧಾರ್ಮಿಕ ವಿಧಿಗಳನ್ನು ರಚಿಸಿಬಿಟ್ಟಿದೆ. ಮತ್ತು ಅವರೆಲ್ಲ ಅವುಗಳಲ್ಲಿ ಸಂತೃಪ್ತರಾಗಿರುವಂತೆ — ಎಲ್ಲ ಜಾತಿಗಳ ಮಧ್ಯೆ ಒಳಸಂಬಂಧವನ್ನು ರೂಪಿಸುವುದರ ಜತೆಗೇನೆ— ಯೋಜಿಸಲಾಗಿದೆ.

ಅಂತೆಯೆ ಜಾತಿಗಳ ನಾಶವೆಂದಾಗ ಜಾತಿಗೆ ಸಂಬಂಧಿಸಿದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಮುಂತಾದ ಸಂಬಂಧ, ಪದ್ಧತಿ, ಕಟ್ಟುಪಾಡುಗಳ ವಿಧಿ ವಿಧಾನಗಳ ಪ್ರಯತ್ನಪೂರ್ವಕವಾದ ನಾಶವೆಂದೇ ಅರ್ಥ.

ಆದರೆ ನಮ್ಮ ಸಮಾಜದಲ್ಲಿ ವರ್ಗನಾಶವಾಗದೇ ಜಾತಿಯು ನಾಶವಾಗಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ತಿಳಿಯಬೇಕಾಗಿದೆ. ಅಸ್ಪೃಶ್ಯತೆಯು, ಜಾತಿಯ ಸಮಸ್ಯೆಯನ್ನು ಕೃಷಿ ಕ್ರಾಂತಿಯ ಜತೆ ಸಂಬಂಧಿಸಿ ಮಾತ್ರ ನೋಡಬೇಕಾಗುತ್ತದೆ. ವರ್ಗ ಹೋರಾಟವಿಲ್ಲದ ಜಾತಿ ಹೋರಾಟಗಳು ವಿಫಲವಾಗುತ್ತಲೇ ಬಂದಿವೆ. (ವಿವರಕ್ಕೆ ನೋಡಿ – ಬಿ.ಟಿ. ರಣದಿವೆ ಅವರ, "(Caste class and Property relation")

ಜಾತಿಗಳ ಜತೆ ಅಸಂಖ್ಯ ದೇವರುಗಳ, ದಟ್ಟ ಅಜ್ಞಾನದ ಆರೆ ಊಳಿಗಮಾನ್ಯ ಭೂ ಸಂಬಂಧಗಳ, ಅಮಾನವೀಯ ಮೌಲ್ಯಗಳ ಗಟ್ಟಿ ಸಂಬಂಧ ಇರುವುದರಿಂದ ಇವೆಲ್ಲವುಗಳ ನಾಶವೇ 'ಜಾತ್ಯಾತೀತ' 'ಪ್ರಜಾಪ್ರಭುತ್ವೀಯ', ಸಮಾನತೆಯ ಸಮಾಜ ನಿರ್ಮಾಣಕ್ಕೆ ನಾಂದಿ ಎಂದರ್ಥವಾಗುತ್ತದೆ.

ಒಟ್ಟು ಚರ್ಚೆಯ ಪ್ರಮುಖ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬೇಕು. ದೇಶವನ್ನು ದೊಡ್ಡ ಬೂರ್ಷ್ವಾಗಳ ಮುಖಂಡತ್ವದಲ್ಲಿ ಭೂಮಾಲೀಕರು, ಮತ್ತು ಬಂಡವಾಳಶಾಹಿಗಳು ಆಳುತ್ತ ಬಂಡವಾಳಶಾಹಿ ಮಾರ್ಗದಲ್ಲಿ ದೇಶವನ್ನು ಕೊಂಡೊಯ್ಯುತ್ತಿರುವುದರ ಫಲವಾಗಿ ಮತ್ತು ರಾಷ್ಟ್ರೀಯ ವಿಮೋಚನಾ ಚಳವಳಿಯಲ್ಲಿ ಮುಖಂಡತ್ವ ವಹಿಸಿದ್ದ ರಾಷ್ಟ್ರೀಯ ಬೂರ್ಷ್ವಾಗಳ ಸಮಯ ಸಾಧಕ ಮತ್ತು ಪ್ರತಿಗಾಮಿ ಧೋರಣೆಗಳಿಂದಲೂ ಉಳಿದು ಬಂದಿರುವ ಅಸಂಖ್ಯ ಅನಿಷ್ಟ, ಸಮಸ್ಯೆಗಳನ್ನು ಸರಿಯಾಗಿ ಅರಿತು ಅವುಗಳ ನಾಶಕ್ಕೆ ವೈಜ್ಞಾನಿಕ ದಾರಿಯನ್ನು ಕಲ್ಪಿಸಿಕೊಳ್ಳುವುದಾಗಿದೆ.

ಅಸಂಖ್ಯ ಜಾತಿಗಳ ಶೋಷಿತ ಜನವರ್ಗವೆಲ್ಲ ಒಂದಾಗಿ ಎಲ್ಲ ಜಾತಿಗಳ ಶೋಷಕ ವರ್ಗದ ವಿರುದ್ಧ ಹೋರಾಡಬೇಕಾದ ಒಂದೇ ಒಂದು ಸ್ಪಷ್ಟವಾದ ದಾರಿ ಇದಾಗಿದೆ.

ವರ್ಗ ಸಹಕಾರದಿಂದ ಸಮಾಜವಾದ ತರಬೇಕೆಂದು ಹೇಳುವ ಹಲವು 'ಸಮಾಜವಾದಿಗಳು' ಭೂಮಾಲಿಕ–ಬಂಡವಾಳಗಾರ ಪಕ್ಷದ ಒಬ್ಬಿಬ್ಬ ಹರಿಜನ ಬೂರ್ಷ್ವಾಗಳು ಮಂತ್ರಿ ಪದವಿ ಪಡೆದುಕೊಂಡ ತಕ್ಷಣ ರೋಮಾಂಚನಗೊಳ್ಳುವರು. ಇವರ ಜಾತಿ ಹೋರಾಟದ ಪ್ರಧಾನತೆಯ ಪೊಳ್ಳುವಾದವನ್ನು ಬಯಲಿಗೆಳೆಯಬೇಕು. [ಜಗಜೀವನರಾಂ ರ " Caste challange in India " ಪುಸ್ತಕದ ವಿಮರ್ಶೆಯನ್ನು ಬಿ. ಟಿ. ರಣದಿವೆಯವರ ಮೇಲೆ ಸೂಚಿಸಿದ ಗ್ರಂಥದಲ್ಲಿ ನೋಡಬೇಕು.]

ವರ್ಗ ಹೋರಾಟದಲ್ಲಿ ಎಲ್ಲ ಜಾತಿಗಳ ಶೋಷಿತ ಜನವರ್ಗವನ್ನು ಸಂಘಟಿಸುತ್ತ ಹೋದಾಗ ಮಾತ್ರ, ಅವರಲ್ಲಿ ಆಳವಾಗಿ ಬೇರೂರಿದ ಜಾತಿ ವೈಷಮ್ಯ, ಮೇಲು-ಕೀಳು, ಮತ್ತಿತರ ಅನೇಕ ರೀತಿಯ ಅಜ್ಞಾನದ ವಿರುದ್ಧ ವ್ಯವಸ್ಥಾಬದ್ಧ ಸೈದ್ಧಾಂತಿಕ ಹೋರಾಟ ಮಾಡುತ್ತ ಅವರನ್ನೆಲ್ಲ ಪ್ರಜಾಪ್ರಭುತ್ವೀಯ, ಸಮಾಜವಾದಿ ಸಮಾನತೆಯ, ಮೌಲ್ಯಗಳ ಪರಿಕಾರರನ್ನಾಗಿ ಮಾಡಲು ಸಾಧ್ಯವಾಗುತ್ತದೆ. ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಂಥ ಕಡೆ, ಎಡ ಶಕ್ತಿಗಳು ಪ್ರಬಲವಾಗಿರುವಲ್ಲಿಯ ಅನುಭವ ಈ ಸಂಗತಿಯನ್ನೇ ಸ್ಪಷ್ಟಪಡಿಸುವುದು. ಗೊಂದಲಲ್ಲಿರುವ ಕರ್ನಾಟಕದ ಸ್ಥಿತಿಗೆ ಇವೆಲ್ಲ ಒಳ್ಳೆಯ ಪಾಠಗಳಾಗುತ್ತವೆ. ತಪ್ಪುಗಳನ್ನು ತಿದ್ದಿಕೊಳ್ಳುವ ಜರೂರು ಬೆಳವಣಿಗೆಯ ಪ್ರಾಥಮಿಕ ಹಂತದಲ್ಲಾದರೆ ಅನೇಕ ಅಪಾಯಗಳನ್ನು ತಪ್ಪಿಸಲಿಕ್ಕಾಗುತ್ತದೆ.

ಇದಕ್ಕೆಲ್ಲ ಜನತೆಯ ಕ್ರಾಂತಿಕಾರಿ ರಾಜಕೀಯ ಪಕ್ಷದ ಸಿದ್ಧಾಂತ ಮತ್ತು ಹೋರಾಟಗಳ ಸತತ ಅಭ್ಯಾಸ, ಆ ದಾರಿಯಲ್ಲಿಯೇ ಸಾಗುವ ನಿಷ್ಠೆ, ಬದ್ಧತೆ, ಅತ್ಯಗತ್ಯವಾಗಿದೆ.

ಮಾನವನ ಭವಿಷ್ಯ

ಡಾ|| ಪಿ. ಕೆ. ಆರ್. ವಾರಿಯರ್

ಮಣಿಪಾಲದ ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಸರ್ಜರಿ ವಿಭಾಗದ ಮುಖ್ಯಸ್ಥರಾಗಿರುವ ಡಾ|| ಪಿ. ಕೆ. ಆರ್. ವಾರಿಯರ್ ಅವರು "ಮಾನವನ ಭವಿಷ್ಯ" ಎಂಬ ವಿಷಯದ ಮೇಲೆ ಇತ್ತೀಚೆಗೆ ಮಣಿಪಾಲದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಾಡಿದ ಮುಖ್ಯ ಭಾಷಣದ ಕನ್ನಡ ಅನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಮನುಷ್ಯನ ಸಮಾಜಕ್ಕೆ ಮೂಲಭೂತವಾದ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡು, ಚರಿತ್ರೆಯ ಗತಿಯನ್ನು ಅರ್ಥೈಸಿಕೊಳ್ಳಲು ನಾನು ಪ್ರಯತ್ನಿಸುತ್ತೇನೆ.

"ಮನುಷ್ಯ ಮೂಲಭೂತವಾಗಿ ದುಷ್ಟನೆ? ಪಾಪಿಯೆ? ಅಥವಾ ಅವನ ದುಷ್ಟತನ, ಅವನ ಸಾಮಾಜಿಕ ಆವರಣದಿಂದ ಅವನು ಪಡೆದದ್ದೆ?" ಇದು ಒಂದು ಮೂಲಭೂತ ಪ್ರಶ್ನೆ.

ಈ ಪ್ರಶ್ನೆಯನ್ನೇ ಬೇರೆ ಶಬ್ದಗಳಲ್ಲಿ ಹೀಗೆ ಹೇಳಬಹುದು,–"ಯಾವುದೇ ಸಮಾಜದಲ್ಲಿ ಕಾಣಿಸುವ ಅವನತಿ, ಆ ಸಮಾಜದ ವ್ಯಕ್ತಿಗಳ ದುರಾಸೆ, ಸ್ವಾರ್ಥ ಮತ್ತು ಅಪ್ರಾಮಾಣಿಕತೆಗಳ ಫಲವೆ? ಅಥವಾ ಯಾವುದೇ ಸಮಾಜದ ಉನ್ನತಿ ಅಥವಾ ಅವನತಿಯ ಸ್ಥಿತಿಗೆ ಬೇರೆ ಕಾರಣಗಳು ಇವೆಯೆ?

"ವ್ಯಕ್ತಿ ಒಳ್ಳೆಯವನಾದರೆ ಸಮಾಜವೂ ಒಳ್ಳೆಯದಾಗುತ್ತದೆ" ಎಂಬ ಪದೇ ಪದೇ ಹೇಳಲಾಗುವ ಮಾತಿಗೆ ಏನಾದರೂ ಅರ್ಥವಿದೆಯೆ?

ವ್ಯಕ್ತಿಗಳನ್ನೂ, ವ್ಯಕ್ತಿಗಳ ಸಮೂಹವನ್ನೂ, ಉಪದೇಶಗಳ ಮುಖಾಂತರ ಪರಿವರ್ತಿಸಿ, ಈ ಭೂಮಿಯನ್ನು ಸ್ವರ್ಗವನ್ನಾಗಿ ಮಾಡ ಬಯಸಿದ ಸುಧಾರಕರಿಗೂ ದೃಷ್ಟಾರರಿಗೂ ಕೊರತೆ ಇಲ್ಲ. ಚರಿತ್ರೆಯ ಉದ್ದಕ್ಕೂ ಅಂತಹವರ ಸಾಲುಸಾಲೇ ಇದೆ. (ರಸ್ಕಿನ್ ಹೇಳಿದ—"ದೇವರ ಸಾಮ್ರಾಜ್ಯ ನಿನ್ನೊಳಗೇ ಇದೆ.") ಆದರೆ ಈ ಮಹಾನುಭಾವರಲ್ಲಿ ಯಾರೂ "ಚರಿತ್ರೆಯಲ್ಲಿ ದುಷ್ಟತನ ಮತ್ತೆ ಮತ್ತೆ ಯಾಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ?" ಎಂಬ ಮೂಲಭೂತ ಪ್ರಶ್ನೆಯನ್ನು ಉತ್ತರಿಸಲೇ ಇಲ್ಲ.

ಭಗವದ್ಗೀತೆ ಘೋಷಿಸುತ್ತದೆ.

"ಯದಾಯದಾಹಿ ಧರ್ಮಸ್ಯ
ಗ್ಲಾನಿರ್ಭವತಿ ಭಾರತಃ
ಅಭ್ಯುತ್ಥಾನಮ್ ಅಧರ್ಮಸ್ಯ
ತದಾತ್ಮಾನಂ ಸೃಜಾಮ್ಯಹಂ"

ಧರ್ಮ, ನಾಶದ ಅಂಚಿಗೆ ಬಂದಾಗಲೆಲ್ಲ ತಾನು ಹುಟ್ಟಿ ಬರುತ್ತೇನೆ ಎಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಘೋಷಿಸಿಕೊಂಡಿದ್ದರೂ, ಮನುಷ್ಯ ಸಮಾಜ ಒಮ್ಮೆ ಪರಿಶುದ್ಧಗೊಂಡ ಬಳಿಕ, ಮತ್ತೆ ಮತ್ತೆ ಏಕೆ ಕಲುಷಿತಗೊಳ್ಳುತ್ತದೆ ಎಂಬುದಕ್ಕೆ ಭಗವದ್ಗೀತೆಯಲ್ಲಿಯೂ ಉತ್ತರವಿಲ್ಲ.

ಈ ಸುಧಾರಕರು, ಸಂತರು, ದೃಷ್ಟಾರರುಗಳಲ್ಲಿ ಹೆಚ್ಚಿನವರು ಪ್ರಾಪಂಚಿಕ ವಿಷಯ, ವಸ್ತುಗಳ ಮೋಹಗಳಿಂದ ದೂರವಿದ್ದು ತಮ್ಮ ಅನುಯಾಯಿಗಳಿಗೆ ಒಂದು ಮಾದರಿ ಎನ್ನಿಸಿಕೊಂಡರು. ದೇಹ, ಮನಸ್ಸುಗಳ ದಂಡನೆ ಮತ್ತು ನಿಗ್ರಹಗಳನ್ನು ಅವರು ಸಂತೋಷದಿಂದ ಪಾಲಿಸಿದರು. ಅವರಲ್ಲಿ ಕೆಲವರು, ತಮ್ಮ ಸುತ್ತಲಿನವರ ಭರ್ತ್ಸನೆ, ಟೀಕೆಗಳನ್ನು ಎದುರಿಸಿದರು. "ಮಾನವ್ಯವನ್ನು ಪರಿಶುದ್ಧಗೊಳಿಸುವ ಮಹೋನ್ನತ ಆದರ್ಶಕ್ಕೋಸ್ಕರ, ಅವರಲ್ಲಿ ಕೆಲವರು ತಮ್ಮ ಪ್ರಾಣವನ್ನು ಬಲಿಕೊಟ್ಟರು.

ಆದಿಶಂಕರಾಚಾರ್ಯ ಸ್ವತಃ ಒಬ್ಬ ಬ್ರಾಹ್ಮಣನಾದರೂ, ತನ್ನ ಸಮಕಾಲೀನ ಬ್ರಾಹ್ಮಣರ ವಿಷಯಲಂಪಟತನ ಮತ್ತು ದುರಾಶೆಗಳಿಂದ ವಿಪರೀತ ನೊಂದುಕೊಂಡಿದ್ದರು, ಆತ ತಮ್ಮ ಎಳೆಯ ವಯಸ್ಸಿನಲ್ಲಿಯೇ ಪ್ರಾಪಂಚಿಕ ಮೋಹವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದರು. ತನ್ನ ಜೀವಿತವನ್ನೆಲ್ಲ ಅವರು,

"ಅರ್ಥ ಮನರ್ಥಂ ಭಾವಯ
ನಿತ್ಯಂ
ನಾಸ್ತಿ ತತಃ ಸುಖಲೇಶಂ ಸತ್ಯಂ"

ಎಂಬ ಉಪದೇಶವನ್ನು ಬೋಧಿಸುತ್ತ ಭಾರತದ ಮೂಲೆಮೂಲೆಗಳನ್ನು ಸಂಚರಿಸುತ್ತ ಕಳೆದರು. ಯಾವುದೇ ಸಾರಿಗೆ ಸೌಲಭ್ಯಗಳು ಇಲ್ಲದ ಆ ಪ್ರಾಚೀನ ಕಾಲದಲ್ಲಿ ಶಂಕರಾಚಾರ್ಯರು ದೇಶವನ್ನೆಲ್ಲ ಸುತ್ತಾಡಿದ್ದು ಒಂದು ಅದ್ಭುತವೇ ಸರಿ. ಆದರೆ "ದುಡ್ಡು, ಆಸ್ತಿಗಳಿಗೆ ಅರ್ಥವಿಲ್ಲ; ಅವುಗಳಿಂದ ಸುಖವೂ ಇಲ್ಲ" ಎನ್ನುವ ಅವರ ಬೋಧನೆಯನ್ನು ಮಾತ್ರ ಅವರ ಕಾಲದ ಪುರೋಹಿತಶಾಹಿ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಶಂಕರಾಚಾರ್ಯರಿಗೆ ಅನುಯಾಯಿಗಳ ದೊಡ್ಡ ಹಿಂಡೇ ಇದೆ. ಆದರೆ ಅವರ ಬೋಧನೆಗಳಿಂದ ನಮ್ಮ ಸಮಾಜದ ಯಾವ ಸಮಸ್ಯೆಯೂ ಪರಿಹಾರವಾಗಿಲ್ಲ; ಅವರ ಅನುಯಾಯಿಗಳೂ ಕೂಡಾ ಬದಲಾಗಿಲ್ಲ. ಶಂಕರಾಚಾರ್ಯರ ಉತ್ತರಾಧಿಕಾರಿಗಳಾದ ಮಠಾಧೀಶರಂತೂ ಭೋಗಲಾಲಸೆಯ ಜೀವನವನ್ನೇ ನಡೆಸುತ್ತಿದ್ದಾರೆ.

ಗೌತಮ ಬುದ್ಧ ಮನುಷ್ಯನ ದುಃಖಕ್ಕೆ ಪರಿಹಾರ ಕಂಡುಹಿಡಿಯಬೇಕೆಂದು ರಾಜ್ಯವನ್ನೂ ತ್ಯಜಿಸಿದ; ಪತ್ನಿಯನ್ನೂ ತ್ಯಜಿಸಿದ. ಅವನ ಶಿಷ್ಯವೃಂದವೂ ದೊಡ್ಡದೇ. ಆದರೆ ಜಪಾನಿನ ಅವನ ಅನುಯಾಯಿಗಳು "ಬುದ್ಧಂ ಶರಣಂ ಗಚ್ಛಾಮಿ" ಎಂಬ ಮಂತ್ರ ಜಪಿಸುತ್ತಲೇ, ಹಿಟ್ಲರನೂ ನಾಚಿಕೊಳ್ಳುವಂತಹ ಘೋರ ಕೃತ್ಯಗಳನ್ನು ಎಸಗಿದರು.

ತನ್ನ ನಂಬಿಕೆಗಳಿಗೋಸ್ಕರ ಶಿಲುಬೆ ಏರಿದ ಏಸುಕ್ರಿಸ್ತ, ತನ್ನ ಸೋದರರ ಪಾಪದ ಹೊರೆಯನ್ನು ತಾನೇ ಹೊರುವುದಾಗಿ ಹೇಳಿಕೊಂಡ. "ಅವರ ಪಾಪಗಳನ್ನು ಕ್ಷಮಿಸಿಬಿಡುವಂತೆ ಸ್ವರ್ಗದಲ್ಲಿರುವ ತನ್ನ ತಂದೆಯನ್ನು ಯಾಚಿಸುವುದಾಗಿ" ಉದ್ಘೋಷಿಸಿದ. ಆದರೆ ವೆಟಿಕನ್ನಿನ (ಕ್ರೈಸ್ತ ಧರ್ಮದ ಕೇಂದ್ರ) ಅವನ ಉತ್ತರಾಧಿಕಾರಿಗಳು, ಬ್ರೂನೋನನ್ನು ಜೀವಂತ ಸುಟ್ಟರು. ಬ್ರೂನೋನ ಅಪರಾಧವಾದರೂ ಏನು? ವಿಜ್ಞಾನವನ್ನೂ ವೈಜ್ಞಾನಿಕ ಮನೋಧರ್ಮವನ್ನೂ ಎತ್ತಿ ಹಿಡಿದಿದ್ದ ಕೋಪರ್ನಿಕಸ್‌ನನ್ನು ಬ್ರೂನೋ ಬೆಂಬಲಿಸಿದ್ದ. ಕ್ರೈಸ್ತನ ಲೋಕಕರುಣೆಯ ಸಂದೇಶವನ್ನು ಹರಡುವ ಪವಿತ್ರ ಕಾಯಕದ ಜವಾಬ್ದಾರಿ ಹೊಂದಿದ್ದ ಕ್ರೈಸ್ತ ಧರ್ಮಗುರುಗಳು ಧರ್ಮದ ಹೆಸರಿನಲ್ಲಿ ರಕ್ತದ ಹೊಳೆಯನ್ನೇ ಹರಿಸಿದರು. ಯಾಕೆ?

ವಿಶ್ವಭ್ರಾತೃತ್ವ ಮತ್ತು ಸಮಾನತೆಯ ಆದರ್ಶಗಳನ್ನು ಪ್ರತಿಪಾದಿಸಿದ್ದಕ್ಕಾಗಿ, ಪ್ರವಾದಿ ಮಹಮ್ಮದ್ ಮೆದಿನಾದಿಂದ ಪಲಾಯನ ಮಾಡಬೇಕಾಯಿತು. ಪ್ರವಾದಿಯ ಹೆಸರಿನಲ್ಲಿ ಅವನ ಅನುಯಾಯಿಗಳು ಕೊಲೆ, ಲೂಟಿ, ಸುಲಿಗೆಗಳನ್ನು ನಡೆಸಿದರು. ರಂಜಾನ್ ಮಾಸದಂದು ಹಂಚುವ "ಸಬತ್" ಸಂಪತ್ತನ್ನು ಸಮಾನವಾಗಿ ಹಂಚುವ ಉದ್ದೇಶವುಳ್ಳದ್ದಾಗಿತ್ತು. ಆದರೆ ಅವನ ಅನುಯಾಯಿಗಳು ಹಂಚಿದ "ಸಬತ್" ಯಾವುದಾಗಿತ್ತು? ಬಾಂಬುಗಳು, ಗುಂಡುಗಳು, ಕೊಲೆ, ಲೂಟಿ, ಮಾನಭಂಗ.

ಮಹಾತ್ಮಾ ಗಾಂಧಿ ತಮ್ಮ "ಅಹಿಂಸಾ ತತ್ವ"ದಿಂದ ಲಕ್ಷಾಂತರ ಜನರ ಹೃದಯದಲ್ಲಿ ನೆಲೆಗೊಂಡರು. ಆದರೂ ಅವರು ಒಬ್ಬ ಕೊಲೆಗಡುಕನ ಗುಂಡೇಟಿಗೆ ಬಲಿಯಾದರು. ಗಾಂಧೀಜಿಯವರ ಅನುಯಾಯಿಗಳು ಎಂದು ತಮ್ಮನ್ನು ಕರೆದುಕೊಳ್ಳುವ, ನಮ್ಮ ದೇಶದ ಆಳುವ ಜನ, ಇಂದು ಅಹಿಂಸೆ, ನಿಗ್ರಹ, ಸಂಯಮ, ಮಿತವ್ಯಯ ಮುಂತಾದ ಎಲ್ಲ ಆದರ್ಶಗಳನ್ನು ಗಾಳಿಗೆ ತೂರಿದ್ದಾರೆ.

ಆಚಾರ್ಯ ವಿನೋಬಾಭಾವೆ ಭೂಮಾಲಿಕರ ಹೃದಯ ಪರಿವರ್ತನೆಗೋಸ್ಕರ ಪ್ರಯತ್ನಿಸಿದರು. ಈ ಪ್ರಯತ್ನ ವಿಫಲವಾದಾಗ, ಅವರು ತಮ್ಮ ಪ್ರೀತಿಯನ್ನು ದನಗಳಿಗೆ ಮೀಸಲಾಗಿಟ್ಟರು.

ವ್ಯಕ್ತಿ ಬದಲಾಗುವುದರಿಂದ, ಸಮಾಜದ ಕ್ಲೇಷ,ಅಲ್ಪತನ; ದುರಾಶೆ, ಭ್ರಷ್ಟತೆ, ಹಿಂಸೆಗಳ ಅವನತಿಯ ಸ್ಥಿತಿ ಬದಲಾಗುವುದಿಲ್ಲ ಎಂಬುದೇ ಚರಿತ್ರೆಯಲ್ಲಿ ಮತ್ತೆ ಮತ್ತೆ ಕಾಣಿಸುವ ಸತ್ಯ.

ಮನುಷ್ಯ ಮೂಲತಃ ದುಷ್ಟನಲ್ಲ ಎಂಬುದನ್ನು ಕೂಡಾ ಚರಿತ್ರೆ ಮತ್ತೆ ಮತ್ತೆ ದೃಢಪಡಿಸುತ್ತದೆ. ಮನುಷ್ಯ ಹುಚ್ಚ, ದುಷ್ಟನೂ, ಕ್ರೂರಿಯೂ ಆಗಿದ್ದಿದ್ದರೆ, ಮೇಲೆ ಹೇಳಿದ ಯಾವ ಸುಧಾರಕರಿಗೂ, ಇಷ್ಟು ದೊಡ್ಡ ಸಂಖ್ಯೆಯ ಅನುಯಾಯಿಗಳಿರುವುದು ಸಾಧ್ಯವೇ ಇಲ್ಲ.

ಮನುಷ್ಯನ ದುಷ್ಟತನ, ಅವನ ಸಾಮಾಜಿಕ ಆವರಣ, ಸಾಮಾಜಿಕ ಸನ್ನಿವೇಶಗಳಿಂದ ಅವನು ಪಡೆದು ಬಂದದ್ದಾಗಿದೆ.

ಆದ್ದರಿಂದ ಸುಧಾರಕರ ಸಂಖ್ಯೆ ಎಷ್ಟೇ ದೊಡ್ಡದಿರಲಿ, ಸಮಾಜದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಹಿಂಸೆ, ದ್ವೇಷ, ದುರಾಶೆಗಳ ಮೇಲೆ, ಈ ಸುಧಾರಕರು ಯಾವ ಪರಿಣಾಮವನ್ನೂ ಮಾಡಲಾರರು.

ಹೀಗೆಂದು, ಮನುಷ್ಯ ಸಮಾಜ ಯಾವತ್ತೂ ಸದಾ ಕೊಳೆತ ಸ್ಥಿತಿಯಲ್ಲಿಯೇ ಇರುತ್ತದೆ, ಇತ್ತು ಎಂದು ನಾವು ಹೇಳಬಹುದೆ? ಸದ್ಗುಣ, ಸಚ್ಚಾರಿತ್ರ್ಯ, ಸಂಪನ್ನತೆ, ಸದಾಚಾರಗಳು ಸಾರ್ವತ್ರಿಕ ಮೌಲ್ಯಗಳಾಗಿ ಶೋಭಿಸುತ್ತಿದ್ದ ಕಾಲವೊಂದು ಚರಿತ್ರೆಯಲ್ಲಿ ಕಾಣಿಸುವುದೇ ಇಲ್ಲವೆ?

ಮನುಕುಲದ ಚರಿತ್ರೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಮನುಷ್ಯ ಸಂಬಂಧಗಳ ಬೆಳವಣಿಗೆಯ ಬಗ್ಗೆ ಅನೇಕ ವಿಸ್ಮಯಕರವಾದ ಒಳನೋಟಗಳು ದೊರೆಯುತ್ತವೆ.

ನಾನು ಆದಿಯ ಮಾನವನ ಅಂದರೆ, ವಾನರಾವಸ್ಥೆಯನ್ನು ಕಳೆದು ಮನುಷ್ಯನಾದ ಅತಿ ಪ್ರಾಚೀನ ಕಾಲದ ಬಗ್ಗೆ ನಿಮ್ಮ ಗಮನ ಸೆಳೆಯಬಯಸುವೆ.

ಆದಿಯ ಮಾನವ, ತನ್ನ ಸಹಚರರೊಡನೆ ಗುಂಪು ಗುಂಪಾಗಿ, ಅಥವಾ ಹಿಂಡುಗಳಲ್ಲಿ ವಾಸಿಸುತ್ತಿದ್ದ. ಕಪಿಗಳು, ಆನೆಗಳು ಮತ್ತು ಎಮ್ಮೆ, ಕೋಣಗಳೂ ಕೂಡಾ ಹೀಗೆಯೇ ಬದುಕುತ್ತವೆ. ಈ ಹಿಂಡುಗಳೇ 'ತಂಡಗಳು' ಅಥವಾ ಪಂಗಡಗಳು ಎನ್ನಿಸಿಕೊಂಡವು. ಈ ಸಾಮೂಹಿಕ ವಾಸ, ಇತರ ಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅವಶ್ಯವಾಗಿದ್ದಿತು. ಆದಿಯ ಮಾನವರು ಪ್ರಕೃತಿಯನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದರು. ಪಂಗಡಗಳ ಎಲ್ಲ ಗಂಡಸರು ಮತ್ತು ಹೆಂಗಸರು ತಮ್ಮ ದಿನದ ಎಲ್ಲ ಕಾಲವನ್ನೂ, ತಮ್ಮ ಪಂಗಡದ ಒಟ್ಟು ಆಹಾರವನ್ನು ಸಂಗ್ರಹಿಸಲು ವ್ಯಯಿಸಬೇಕಾಗಿದ್ದಿತು. ಈ ಸನ್ನಿವೇಶದಲ್ಲಿ ಪಂಗಡದ ಯಾರೂ ಇನ್ನೊಬ್ಬನ ವಿರುದ್ಧ ದ್ವೇಷ ಕಟ್ಟಿಕೊಳ್ಳುವ ಪ್ರಮೇಯವೇ ಇರಲಿಲ್ಲ; ಯಾಕೆಂದರೆ ಇಂತಹ ಭಾವನೆಯಿಂದ ಲಭ್ಯವಾಗುವ ವೈಯಕ್ತಿಕ ಲಾಭವೇನೂ ಇರಲಿಲ್ಲ.

ಕಾಲ ಕಳೆದಂತೆ ಮನುಷ್ಯ ಕೃಷಿ ಮತ್ತು ಪ್ರಾಣಿ ಸಾಕಣೆಯ ಕೌಶಲ್ಯವನ್ನು ಸಾಧಿಸಿಕೊಂಡ. ಆಹಾರಕ್ಕೋಸ್ಕರ ಅಲೆದಾಡುವ ಬದಲು, ತನ್ನ ಆಹಾರವನ್ನು ಬೆಳೆದುಕೊಳ್ಳಲು ಮನುಷ್ಯ ಕಲಿತುಕೊಂಡ. ಪಂಗಡದ ಸಾಮೂಹಿಕ ದುಡಿಮೆ ಈಗ ಉತ್ಪಾದನಾ ಚಟುವಟಿಕೆಯ ಸ್ವರೂಪವನ್ನು ಪಡೆದುಕೊಂಡಿತು. ಈ ಸಾಮೂಹಿಕ ದುಡಿಮೆಯ ಫಲವನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳುತ್ತಿದ್ದರು. ಆಹಾರಕ್ಕೋಸ್ಕರ ಅಲೆದಾಡುವ ಬದಲು, ಆಹಾರವನ್ನು ತಾವೇ ಬೆಳೆದುಕೊಳ್ಳುವ ಬದಲಾದ ಪರಿಸ್ಥಿತಿಯಲ್ಲಿ, ಆಹಾರಕೋಸ್ಕರ ಕಳೆಯಬೇಕಾದ ಕಾಲಾವಧಿಯೂ ಕಡಿಮೆಯಾಯಿತು; ಅಂದರೆ ಪಂಗಡಗಳ ಸದಸ್ಯರಿಗೆ ಈಗ ಹೆಚ್ಚು ವಿರಾಮ ದೊರೆಯಿತು. ಹೆಚ್ಚು ವಿರಾಮ ಮಾಡಿದಂತೆ ಕೃಷಿಯ ಕೌಶಲ್ಯವೂ ಹೆಚ್ಚುತ್ತ ಹೋಯಿತು; ಇದು ಇನ್ನಷ್ಟು ವಿರಾಮಕ್ಕೆ ಎಡೆಮಾಡಿಕೊಟ್ಟಿತು.

ಈ ವಿರಾಮದಿಂದ ಕೈಕಸುಬುಗಳು—ಬಟ್ಟೆ ಹೆಣೆಯುವುದು, ಮಣ್ಣಿನ ಪಾತ್ರೆಗಳನ್ನು ಮಾಡುವುದು ಮುಂತಾದವು-ಬೆಳೆದವು.

ಪಂಗಡಗಳಲ್ಲಿ ಎಲ್ಲರೂ, ಉತ್ಪಾದನೆಯನ್ನು ಸಮಾನವಾಗಿ ಹಂಚಿಕೊಳ್ಳುತ್ತಿದ್ದುದರಿಂದ ಪಂಗಡಗಳ ಸಾಮರಸ್ಯದಲ್ಲಿ ವ್ಯತ್ಯಯ ಉಂಟಾಗಲಿಲ್ಲ. ಕಾಲಕಳೆದಂತೆ ಪಂಗಡಗಳು ತಮ್ಮ ಅಗತ್ಯಕ್ಕೂ ಮೀರಿದ ಕೌಶಲಗಳನ್ನು ಸಾಧಿಸಿಕೊಂಡರು; ಉಪಕರಣಗಳನ್ನು ರೂಪಿಸಿಕೊಂಡರು, ಬೇರೆ ಬೇರೆ ಪಂಗಡಗಳು, ವಿಭಿನ್ನ ಕೌಶಲ್ಯಗಳನ್ನು, ವಿಭಿನ್ನ ಉಪಕರಣಗಳನ್ನು ರೂಪಿಸಿಕೊಂಡರು. ಪಂಗಡಗಳೊಳಗೆ ಈ ಉಪಕರಣಗಳನ್ನು ಕೊಂಡುಕೊಳ್ಳುವ ಪದ್ಧತಿ ಜಾರಿಗೆ ಬಂದಿತು. ಮಾನವನ ವಿಕಾಸದ ಚರಿತ್ರೆಯ ದಿಗಂತದಲ್ಲಿ ವಾಣಿಜ್ಯದ ಉದಯವಾಯಿತು. ಇದರೊಡನೆಯೇ ಯಾರು ವಾಣಿಜ್ಯವನ್ನು ನಡೆಸಬೇಕು, ಯಾರು ಕೃಷಿಯಲ್ಲಿ ನಿರತರಾಗಬೇಕು ಎಂದು ನಿರ್ಧರಿಸಲು ಒಂದು ಅಧಿಕಾರ ಕೇಂದ್ರದ ಅವಶ್ಯಕತೆಯು ಮೂಡಿತು.

ಸಮಾನತೆ ಸಾಮರಸ್ಯಗಳಲ್ಲಿ ಬದುಕುತ್ತಿದ್ದ ಪಂಗಡಗಳು ನಿಧಾನವಾಗಿ, ಸಂಘಟಿತ ಸಮಾಜಗಳಾಗಿ ರೂಪುಗೊಂಡವು. ಈ ಸಮಾಜದಲ್ಲಿ

ಕೆಲವರು, ಉಳಿದವರ ಮೇಲೆ ಅಧಿಕಾರ ಚಲಾಯಿಸಬಲ್ಲವರಾಗಿದ್ದರು. ಈ ನೂತನ ಸಂಘಟನೆಯಿಂದಾಗಿ ಉತ್ಪಾದನೆಯಲ್ಲಿ ಇನ್ನಷ್ಟು ಹೆಚ್ಚಳವಾಯಿತು.

ಈ ಸಮಾಜದಲ್ಲಿ ಅಧಿಕಾರ ಚಲಾಯಿಸುವವರು, ತಾವೇ ಸ್ವತಃ ದುಡಿಯದೆಯೂ, ದುಡಿಯುವವರ ಶ್ರಮದ ಫಲಗಳನ್ನು ಅನುಭೋಗಿಸತೊಡಗಿದರು.

ನಿಧಾನವಾಗಿ, ಹಲವು ಶತಮಾನಗಳ ಕಾಲಾವಧಿಯಲ್ಲಿ ಈ ದುಡಿಯುವವರು, ಯಾವುದೇ ಸ್ವಂತ ಹಕ್ಕುಗಳಿಲ್ಲದ ಗುಲಾಮರಾದರು; ಕೂತು ತಿನ್ನುವ ಅಧಿಕಾರಿ ವರ್ಗದವರು, ಎಲ್ಲ ಸ್ವಾತಂತ್ರ್ಯಗಳನ್ನು ಪಡೆದ ಒಡೆಯರಾದರು.

ಗುಲಾಮರ ದುಡಿಮೆಗೂ ಈ ಅಧಿಕಾರಿಗಳು ಒಡೆಯರಾದರು. ಹೀಗೆ ಖಾಸಗೀ ಆಸ್ತಿಯ ಕಲ್ಪನೆ ಮತ್ತು ವಾಸ್ತವ, ಚರಿತ್ರೆಯ ರಂಗ ಪ್ರವೇಶ ಮಾಡಿತು.

ಪಂಗಡಗಳ ಸಾಮರಸ್ಯ, ಸಮಾನತೆ ಮಾಯವಾಯಿತು; ದುಡಿಮೆ ಎಲ್ಲರದ್ದೂ, ಫಲ ಎಲ್ಲರಿಗೂ ಎಂಬ ತತ್ವ ಕಣ್ಮರೆಯಾಯಿತು; ಅದರ ಬದಲಿಗೆ ಮೇಲು ಕೀಳು ಎನ್ನುವ ತಾರತಮ್ಯ, ಒಬ್ಬನ ದುಡಿಮೆಯನ್ನು ಇನ್ನೊಬ್ಬ ಕಬಳಿಸುವುದು, ಒಬ್ಬನ ಮೇಲೆ ಇನ್ನೊಬ್ಬ ಅಧಿಕಾರ ಚಲಾಯಿಸುವುದು ಪ್ರಾರಂಭವಾಯಿತು.

ಸಮಾಜ ವೈಯಕ್ತಿಕ ದುಡಿಮೆ ಮತ್ತು ವೈಯಕ್ತಿಕ ಲಾಭಗಳ ಕಲ್ಪನೆಯನ್ನು ಗೌರವಿಸಲಾರಂಭಿಸಿತು. ಸಮಾಜದ ರಕ್ಷಣೆಗಾಗಿ ಮತ್ತು ಅಧಿಕಾರದ ಉಸ್ತುವಾರಿಗಾಗಿ, ಎಲ್ಲರ ದುಡಿಮೆಯಲ್ಲಿಯೂ ಒಂದು ಪಾಲನ್ನು ವಿನಾಸಲಾಗಿಡುವ ಪದ್ಧತಿ ಜಾರಿಗೆ ಬಂದಿತು. ಈ ಅಧಿಕಾರ ಕೇಂದ್ರಕ್ಕೆ ಅವಶ್ಯಬಿದ್ದರೆ ಬಲಪ್ರಯೋಗ ನಡೆಸಲೂ ಸಮಾಜದ ಸಮ್ಮತಿ ಇದ್ದಿತು.

ಈ ಗುಲಾಮ ವ್ಯವಸ್ಥೆ, ಗುಲಾಮರನ್ನು ಹೆಚ್ಚು ಹೆಚ್ಚು ಲಾಭಕ್ಕೋಸ್ಕರ ಮಿತಿಮೀರಿ ದುಡಿಸುವುದನ್ನು ಮನ್ನಿಸಿತು. ಯಾಕೆಂದರೆ ಈ ದುಡಿಮೆ ಹೆಚ್ಚಿದಷ್ಟೂ ಒಟ್ಟು ಸಮಾಜದ ಉತ್ಪಾದನೆಯೂ ಹೆಚ್ಚುತ್ತಿದ್ದಿತು.

ಈ ವ್ಯವಸ್ಥೆ ಅಸಮಾನ ಒಡೆತನ, ಮತ್ತು ಅಸಮಾನ ಹಂಚಿಕೆಗಳ ಶ್ರೇಣೀಕೃತ ವ್ಯವಸ್ಥೆಯಾಗಿದ್ದಿತು. ದುಡಿಮೆಯ ಫಲವನ್ನು ಅನುಭೋಗಿಸುವುದರಲ್ಲಿ ಅಸಮಾನತೆಯನ್ನು ರೂಢಿಸಿಕೊಂಡ ಈ ವ್ಯವಸ್ಥೆಯಲ್ಲಿ ಖಾಸಗೀ ಆಸ್ತಿ ಸಂಗ್ರಹಣೆಯೇ ದುಡಿಮೆಯ ಮುಖ್ಯ "ಪ್ರಚೋದನೆ"ಯಾಯಿತು.

ಆದರೆ ಮಾನವನ ಬೆಳವಣಿಗೆಯಲ್ಲಿ ಈ ಬದಲಾವಣೆ ಒಂದು "ಚಾರಿತ್ರಿಕ ಅಗತ್ಯ" ಎಂಬುದನ್ನು ನಾವು ಮರೆಯಕೂಡದು. ಈ ಬದಲಾವಣೆ ಆಗಿರದೆ ಇರುತ್ತಿದ್ದರೆ ನಾವು ಈಗಲೂ ಆದಿಯ ಮಾನವರ ಸ್ಥಿತಿಯಲ್ಲಿಯೇ ಇರಬೇಕಾಗಿದ್ದಿತು.

ಈ ಬದಲಾವಣೆ ಮನುಷ್ಯ ಸಂಬಂಧಗಳಲ್ಲಿ, ಪಂಗಡಗಳ ಬದುಕಿನಲ್ಲಿದ್ದ ಸಾಮರಸ್ಯವನ್ನು ಸಂಪೂರ್ಣವಾಗಿ ನಾಶಪಡಿಸಿ, ಮನುಷ್ಯ ಮನುಷ್ಯರ ನಡುವೆ ಕೆಲವು ಸಂಘರ್ಷಗಳನ್ನು ಹುಟ್ಟುಹಾಕಿತು. ಈ ಸಂಘರ್ಷಗಳು ಯಾವುವು.

1. ಗುಲಾಮರು ಮತ್ತು ಗುಲಾಮರ ಒಡೆಯರ ನಡುವಿನ ಸಂಘರ್ಷಗಳು.

ಎ) ಗುಲಾಮರ ಒಡೆಯರು ಗುಲಾಮರ ಮೇಲೆ ಒತ್ತಾಯದ, ಬಲಾತ್ಕಾರದ ದುಡಿಮೆಯನ್ನು ಹೇರುತ್ತಿದ್ದರು.

ಬಿ) ಒಡೆಯರು ತಮ್ಮ ಗುಲಾಮರ, ಅವರ ಕನಿಷ್ಠ ಅಗತ್ಯಗಳನ್ನು ಮಾತ್ರ ಪೂರೈಸುತ್ತಿದ್ದರು.

ಸಿ) ದುಡಿಮೆಯ ಉಪಕರಣಗಳನ್ನು ಈ ಒಡೆಯರು ದಿನೇ ದಿನೇ ಪರಿಷ್ಕರಿಸಬೇಕಾಗಿತ್ತು.

ಈ ಮೂರು ವಿಧಾನಗಳಿಂದ ಮಾತ್ರ ಗುಲಾಮರ ಒಡೆಯರು ಹೆಚ್ಚು ಸಂಪತ್ತನ್ನು ಶೇಖರಿಸಲು ಸಾಧ್ಯವಾಗುತ್ತಿತ್ತು. ಅಪರೋಕ್ಷವಾಗಿ ಈ ಮೂರು ವಿಧಾನಗಳಿಂದ ಒಟ್ಟು ಸಮಾಜದ ಉತ್ಪಾದನೆಯೂ ಹೆಚ್ಚುತ್ತಿದ್ದಿತು.

ಆದರೆ ಗುಲಾಮರ ಹಿತಾಸಕ್ತಿಗಳು, ಮಾತ್ರ ವ್ಯವಸ್ಥೆಯ ಹಿತಾಸಕ್ತಿಗಳಿಗೆ ತದ್ವಿರುದ್ಧವಾಗಿದ್ದವು. ಶತಮಾನಗಳು ಉರುಳಿದಂತೆ, ಗುಲಾಮರು ತಮ್ಮ ಒಡೆಯರ ವಿರುದ್ಧ ದಂಗೆಯೇಳಲು ಸನ್ನದ್ಧರಾದರು. ಗುಲಾಮರ ದಂಗೆಗಳಿಗೆ ಚರಿತ್ರೆಯಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ.

ರೋಮನ್ ಚಕ್ರಾಧಿಪತ್ಯದ ಉದ್ದಕ್ಕೂ ಗುಲಾಮರ ದಂಗೆಗಳು ಕಾಣಸಿಗುತ್ತವೆ. ಈ ದಂಗೆಗಳಲ್ಲಿ ಸ್ಪಾರ್ಟಕಸ್ ಮತ್ತು ಅವನ ಬೆಂಬಲಿಗರ ದಂಗೆ ಇತಿಹಾಸ ಪ್ರಸಿದ್ಧವಾಗಿದೆ.

2. ಹೆಚ್ಚು ಹೆಚ್ಚು ವೈಯಕ್ತಿಕ ಗಳಿಕೆಗೋಸ್ಕರ ಗುಲಾಮರ ಒಡೆಯರೊಳಗೇ ಸಂಘರ್ಷಗಳು ಪ್ರಾರಂಭವಾದವು.

ಈ ಸಂಘರ್ಷಗಳ ಬಗೆಹರಿಸಲು, ಅವಶ್ಯಬಿದ್ದರೆ ಬಲಪ್ರಯೋಗಕ್ಕೂ ಕೇಂದ್ರೀಕೃತ ಅಧಿಕಾರ ವ್ಯವಸ್ಥೆ ಸಿದ್ಧವಾಗಿರಬೇಕಾಗಿತ್ತು.

ಈ ಕೇಂದ್ರೀಕೃತ ಅಧಿಕಾರ ವ್ಯವಸ್ಥೆಯೇ "ಪ್ರಭುತ್ವ"ಎನ್ನಿಸಿಕೊಂಡಿತು.

"ಪ್ರಭುತ್ವ" ಎಂದರೆ, ಹಾಲೀ ವ್ಯವಸ್ಥೆಯನ್ನು ರಕ್ಷಿಸಲೋಸುಗ, ಅವಶ್ಯಬಿದ್ದರೆ ಬಲಪ್ರಯೋಗ ಮಾಡುವ ಒಂದು ಕೇಂದ್ರೀಕೃತ ವ್ಯವಸ್ಥೆ ಎಂದು ನಿರ್ವಚಿಸಬಹುದು. ಪ್ರಭುತ್ವದ ಉದ್ದೇಶವೇ ವ್ಯವಸ್ಥೆಯನ್ನು ರಕ್ಷಿಸುವುದು.

ಪೋಲಿಸರು, ಸೈನ್ಯ ಮುಂತಾದವು ಈ ಪ್ರಭುತ್ವದ ಬಲಪ್ರಯೋಗದ ಉಪಕರಣಗಳು.

ಈ ಕರ್ತವ್ಯದ ನಿರ್ವಹಣೆಗೋಸ್ಕರ ರೂಪಿಸಿಕೊಳ್ಳುವ ಸೂತ್ರಗಳೇ "ಕಾನೂನುಗಳು."

ಈ ಗುಲಾಮ ವ್ಯವಸ್ಥೆಯನ್ನ ಉಳಿಸಲು, ರಕ್ಷಿಸಲು, ಈ ವ್ಯವಸ್ಥೆಯ ಒಳಗೆ ಉತ್ಪಾದನೆಯನ್ನು ಹೆಚ್ಚಿಸಲು, ರಾಜ್ಯ, ಪ್ರಭುತ್ವ, ಸೈನ್ಯ, ಕಾನೂನುಗಳ ಸಮಾಜ ವ್ಯವಸ್ಥೆ ರೂಪುಗೊಂಡಿತು.

ಈ ವ್ಯವಸ್ಥೆಯು ಅನುಕೂಲಗಳೆಲ್ಲವೂ ಗುಲಾಮರ ಒಡೆಯರುಗಳಿಗೆ; ದುಡಿಮೆ ಗುಲಾಮರಿಗೆ. ಇದನ್ನು ಪ್ರತಿಭಟಿಸಿದರೆ ಇವರನ್ನು ಶಿಕ್ಷಿಸಲೂ ತಕ್ಕ ವ್ಯವಸ್ಥೆ ಇದೆ.

ಈ ವ್ಯವಸ್ಥೆಯಲ್ಲಿ ನಾವು ಈಗಾಗಲೇ ನೋಡಿದ ಸಂಘರ್ಷಗಳ ಕಾರಣದಿಂದಾಗಿ, ಹೆಚ್ಚು ಬೆಳವಣಿಗೆಗೆ ಆಸ್ಪದವಿಲ್ಲ. ಕೆಲ ಶತಮಾನಗಳ ಕಾಲಾವಧಿಯಲ್ಲಿಯೇ ಇದರ ಬೆಳವಣಿಗೆ ಸ್ಥಗಿತಗೊಂಡಿತು. ಸಮಾಜ ವ್ಯವಸ್ಥೆ ಹೊಸದೊಂದು ಬದಲಾವಣೆಗೆ ಸಿದ್ಧವಾಗಿತ್ತು.

ಈ ಬದಲಾದ ಪರಿಸ್ಥಿತಿಯೇ ಊಳಿಗಮಾನ್ಯ ಪದ್ಧತಿಯ ಉಗಮ. ವಿಸ್ತಾರವಾದ ಹಿಡುವಳಿಗಳ ಒಡೆಯರಾದ ಭೂಮಾಲೀಕರೇ ಪ್ರಧಾನ ಪಾತ್ರವಹಿಸಿದ್ದ ಈ ವ್ಯವಸ್ಥೆಯೂ ತನ್ನದೇ ಆದ ಕಾನೂನು ಕಟ್ಟಳೆಗಳನ್ನು ಹೊಂದಿತು.

ಮುಂದಿನ ಸಂಚಿಕೆ ನೋಡಿ

ಪ್ರವಾಹ ಪೀಡಿತರ ಸಭೆ

ಮಳೆಗಾಲ ಈಗಾಗಲೇ ಆರಂಭವಾಗಿದ್ದು, ಕಳೆದ ವರ್ಷದ ತುಂಗಾ ಪ್ರವಾಹ ಪೀಡಿತರ ಪುನರ್ವಸತಿ ಕಾರ್ಯ ಸ್ಥಗಿತ ಸ್ಥಿತಿಯಲ್ಲಿ ಅಧಿಕಾರಿಗಳಿಂದ ನಡೆಯುತ್ತಿರುವ ಬಗ್ಗೆ ಶಿವಮೊಗ್ಗ ನಗರ ಕೊಳಚೆ ಪ್ರದೇಶ ವಾಸಿಗಳ ಕ್ರಿಯಾ ಸಮಿತಿ ತುರ್ತು ಸಭೆ ತೀವ್ರ ವಿಷಾದ ಹಾಗೂ ಕಳವಳ ವ್ಯಕ್ತಪಡಿಸಿತು. ಅಲ್ಲದೇ ಅಧಿಕಾರಿಗಳ ಅಲಕ್ಷ್ಯ ಧೋರಣೆ ಪ್ರತಿಭಟಿಸಲು ನೇರ ಕ್ರಮ ಅನಿವಾರ್ಯ ಆದೀತೆಂಬ ಎಚ್ಚರಿಕೆಯನ್ನೂ ಸಹಾ ನೀಡಿತು. ಸಭೆಯ ಅಧ್ಯಕ್ಷತೆಯನ್ನು ಕೆ. ಶ್ರೀನಿವಾಸ ಅಯ್ಯಂಗಾರ್ ವಹಿಸಿದ್ದು, ಪಿ. ಎಂ. ಕಣ್ಣನ್ ಅವರು ಕ್ರಿಯಾ ಸಮಿತಿ ಇಲ್ಲಿಯವರೆಗೆ ನಡೆಸಿದ ಕಾರ್ಯಕ್ರಮಗಳನ್ನು ವಿವರಿಸಿದರು. ಸಭೆ ದಿ॥ 22-5-83ನೇ ಭಾನುವಾರ ಸಂಜೆ ಕುಂಬಾರಗುಂಡಿ ಕೊಳಚೆ ಪ್ರದೇಶದಲ್ಲಿ ನಡೆಯಿತು.

ಕನಿಷ್ಠ ಕೂಲಿಯಲ್ಲಿ ಹೆಚ್ಚಳ, ತುಟ್ಟಿ ಭತ್ಯೆ ಜಾರಿ

ಬೀಡಿ ಕಾರ್ಮಿಕರ ಯಶಸ್ವಿ ಹೋರಾಟ

ಹೋರಾಟವೊಂದೇ ತಮ್ಮೆಲ್ಲಾ ಸಮಸ್ಯೆಗಳಿಗೂ ಪರಿಹಾರ ಎಂಬುದನ್ನು ಬೀಡಿ ಕಾರ್ಮಿಕರು ಅರಿತುಕೊಂಡಿರುವುದು ಪ್ರಶಂಸಾರ್ಹವಾಗಿದೆ ಮುಖ್ಯವಾಗಿ ದ. ಕ. ಜಿಲ್ಲೆ, ತುಮಕೂರು ಜಿಲ್ಲೆಯ ಸಿರಾ, ಕುಣಿಗಲ್ ಹಾಗೂ ತುಮಕೂರು, ಹರಿಹರ, ಬೆಂಗಳೂರು ಮತ್ತಿತರ ವಿಭಾಗಗಳ ಬೀಡಿ ಕಾರ್ಮಿಕರು ಕರ್ನಾಟಕ ರಾಜ್ಯ ಬೀಡಿ ವರ್ಕರ್ಸ್ ಫೆಡರೇಷನ್ ಸಿ. ಐ. ಟಿ. ಯು. ಕರೆಯ ಮೇರೆಗೆ ಇತರ ಸಂಘಟನೆಗಳನ್ನೂ ಸೇರಿಸಿಕೊಂಡು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಹೋರಾಟ ನಡೆಸಿರುವುದು ಕೊನೆಯಲ್ಲ ನಿರಂತರವಾದುದು ಎಂಬ ಅರಿವಿಗೆ ಬಂದಿದ್ದಾರೆ.

ಬೀಡಿ ಮಾಲೀಕರೂ, ಗುತ್ತಿಗೆದಾರರೂ ಹಾಗೂ ಅವರ ರಕ್ಷಣೆಯಲ್ಲಿರುವ ಲೇಬರ್ ಡಿಪಾರ್ಟ್‌ಮೆಂಟುಗಳೂ, ಸರ್ಕಾರಗಳೂ ಶೋಷಕ, ಬಂಡವಾಳಸ್ಥರ ವರ್ಗ ರಕ್ಷಕರೆಂಬುದನ್ನು ಬೀಡಿ ಮಜೂರರು ಅರಿತುಕೊಂಡಿದ್ದಾರೆ. ಐಕ್ಯ ಬಲಿಷ್ಠ, ಹಾಗೂ ನಿರಂತರವಾದ ಹೋರಾಟ ಅನಿವಾರ್ಯ ಎಂಬುದು ಚಾರಿತ್ರಿಕ ಸತ್ಯ.

ಹೊಗೆ ಸೊಪ್ಪಿನ ಘಾಟು ಹೊಗೆಗಳಿಂದಲೂ, ಕಮ್ಮಿ ಕೂಲಿಯಿಂದಾಗಿಯೂ ಸರಿಯಾದ ಸವಲತ್ತುಗಳಿಂದ ವಂಚಿತರಾಗಿರುವ ಮಿಲಿಯಾವಧಿ ಬೀಡಿ ಮಜೂರರು ಕೆಮ್ಮು, ದಮ್ಮು, ಆಸ್ತಮಾ ಮುಂತಾದ ರೋಗಗಳಿಂದ ಬಳಲುತ್ತಿರುವುದು ಸಾಮಾನ್ಯ ಸಂಗತಿ. ಈ ರೋಗಗಳಿಂದ ವಿಮುಕ್ತಿ ಎಂದರೆ, ಈ ರೋಗಗಳಿಗೆ ಮೂಲ ಶಕ್ತಿಯಾದ ಶೋಷಕ ವರ್ಗ ಶಕ್ತಿಯನ್ನು ನಿರಂತರ ಹೋರಾಟಗಳಿಂದಲೇ ರದ್ದುಪಡಿಸಿ ಶಾಶ್ವತ ಚಿಕಿತ್ಸೆ ಪಡೆಯಬೇಕೆಂಬುದೇ ಬೀಡಿ ಮಜೂರರಿಗೆ ಬರಬೇಕಾದ ವರ್ಗ ಹೋರಾಟದ ತಿಳುವಳಿಕೆ.

ಈ ವರ್ಷ ಜಾಗತಿಕ ಕಾರ್ಮಿಕ ವರ್ಗದ ತತ್ವಜ್ಞಾನಿ, ಕಾರ್ಮಿಕ ವರ್ಗವೇ ಒಂದು ಶಕ್ತಿ, ಅದರ ವರ್ಗ ವಿರೋಧಿ ಹೋರಾಟವೇ ಜಾಗತಿಕ ಶಾಶ್ವತ ಶಾಂತಿಶ್ಯ ಎಂದು ಪ್ರತಿಪಾದಿಸಿ, ವೈಜ್ಞಾನಿಕ ತಳಹದಿ ಹಾಕಿದ ಕಾರ್ಲ್ ಮಾರ್ಕ್ಸ್ ಅವರ ಶತಾಬ್ದಿ ಹಾಗೆಯೇ ಸಿ. ಐ. ಟಿ. ಯು. ವಿನ 13 ವರ್ಷಗಳ ಸ್ಥಾಪನಾ ತಿಂಗಳು –ಮೇ ತಿಂಗಳು. ಜಾಗತಿಕ ಕಾರ್ಮಿಕ ದಿನಾಚರಣೆ ಮೇ ದಿನಾಚರಣೆ.

ರಾಜ್ಯ ಬೀಡಿ ಫೆಡರೇಷನ್ ಸಿ. ಐ. ಟಿ. ಯು. ಕರೆಯ ಮೇರೆಗೆ ಮಾರ್ಚ್ 24ರಿಂದ ಬೀಡಿ ಮಜೂರರು ಬೇಡಿಕೆಯ ಸಪ್ತಾಹವನ್ನು ಆಚರಿಸಿದರು. ಹಲವು ಮೆರವಣಿಗೆ, ಸಭೆಗಳನ್ನು ನಡೆಸಿ ಮಾಲೀಕರಿಗೂ, ಸರ್ಕಾರಕ್ಕೂ ಬೇಡಿಕೆಗಳ ಮನವಿಗಳನ್ನು ಅರ್ಪಿಸಿದರು. ಆದರೂ ಇದು ತಾತ್ಸಾರಕ್ಕೆ ಒಳಗಾಯಿತು. ಮತ್ತೆ ಏಪ್ರಿಲ್ 25ರಿಂದ ಮುಷ್ಕರ ತೀವ್ರವಾಯಿತು. ದ. ಕ. ಜಿಲ್ಲೆ, ತುಮಕೂರು, ಹರಿಹರ, ಬೆಂಗಳೂರು ಮುಂತಾದ ಕಡೆ ಪಿಕೆಟಿಂಗ್, ಘೆರಾವೋಗಳು ನಡೆದವು.

ಪರಿಣಾಮವಾಗಿ ಕಾರ್ಮಿಕ ಮಂತ್ರಿಗಳಿಂದ 19-5-83 ರಂದು ಹೋರಾಟ ನಿಲ್ಲಿಸಲು ಮತ್ತು ಮಾತುಕತೆಗೆ ಕರೆ ಬಂದಿತು. ಅಂದು ಒಂದು ಸಮಿತಿ ರಚನೆಯಾಯಿತು. ಅದು ಲೇಬರ್ ಕಮಿಷನರ್ ಕಛೇರಿಗೆ ಹೋಗಿ 25ರ ವರೆವಿಗೆ ಮುಂದುವರಿಯಿತು. 26-5-83ರಂದು ಲೇಬರ್ ಕಮಿಷನರ್ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಒಪ್ಪಂದಕ್ಕೆ ಸಹಿ ಹಾಕಿದವರೆಂದರೆ, ಸಿ. ಐ. ಟಿ. ಯು. ನ ಪರವಾಗಿ, ಕಾ। ಎಸ್. ಸೂರ್ಯನಾರಾಯಣರಾವ್, ಕಾ। ಪಿ. ರಾಮಚಂದ್ರರಾವ್ ಮತ್ತು ಕಾ। ಮಹಮದ್ ದಸ್ತಗೀರ್ ಅವರುಗಳು ಹಾಗೂ ಮಾಲೀಕರ ಪರವಾಗಿ ಭಾರತ್ ಬೀಡಿ ವರ್ಕ್ಸ್ ಮಾಲೀಕರಾದ ಬೀಡಿ ಮಾಲೀಕರ ಸಂಘದ ಉಪಾಧ್ಯಕ್ಷರಾದ ಶ್ರೀ ಗಣಪತಿ ಪೈ ಮತ್ತಿತರ ಮಾಲೀಕರು ಹಾಗೂ ಇತರ ಕಾರ್ಮಿಕ ಮುಖಂಡರುಗಳು. ಈ ಒಪ್ಪಂದದ ಸಂಬಂಧಗಳಲ್ಲಿ ತ್ರಿಪಕ್ಷ ಸಭೆಗಳಲ್ಲಿ ದ. ಕ. ಜಿಲ್ಲೆಯ ಸಿ. ಐ. ಟಿ. ಯು. ಮುಖಂಡರುಗಳಾದ ಕಾ। ಯು. ಬಿ. ಲೋಕಯ್ಯ, ಕೆ. ಮುಸಬ್ಬ ಮತ್ತಿತರ ಸಂಗಾತಿಗಳು ಪಾಲ್ಗೊಂಡಿದ್ದರು.

ಈ ಕೆಳಕಂಡಂತೆ ಒಪ್ಪಂದಕ್ಕೆ ಬರಲಾಗಿದೆ. 1000 ಬೀಡಿಗೆ ರೂ. 7-40 ಪೈಸೆಯಿಂದ 8-80ನ್ನು ಪಡೆಯಲು ಸಾಧ್ಯವಾಗಿದೆ. ಇದು 1-6-1983 ರಿಂದ ಜಾರಿಗೆ ಬರುತ್ತದೆ. ಬೀಡಿ ಕೈಗಾರಿಕೆಯಲ್ಲಿ ಪ್ರಥಮ ಬಾರಿಗೆ ತುಟ್ಟಿಭತ್ಯೆ ಕಾಯಿದೆಯನ್ನು ಪಡೆಯಲು ಮಾಲೀಕರನ್ನು ಒಪ್ಪಿಸಲು ಸಾಧ್ಯವಾಗಿದೆ. ಬೆಲೆ ಸೂಚ್ಯಂಕದ ಒಂದು ಪಾಯಿಂಟಿಗೆ ಎರಡು ಪೈಸೆಯಂತೆ ತುಟ್ಟಿಭತ್ಯೆಯನ್ನು ಮಾಲೀಕರು ಮಜೂರರಿಗೆ ಕೊಡಲು ಒಪ್ಪಿದ್ದಾರೆ. ಈ ಚಾರಿತ್ರಿಕ ಒಪ್ಪಂದ ದಿನಾಂಕ 1-3-1984ರಿಂದ ಜಾರಿಯಾಗುತ್ತದೆ ಹಾಗೂ ಪ್ರತಿ ಬೀಡಿ ಮಜೂರರಿಗೆ ಗುರುತಿನ ಚೀಟಿ ನೀಡಲು ಮತ್ತು ಗೊತ್ತಾದ ಎಲೆ ಅವರೇಜ್ ಮಾತ್ರ ಪಡೆಯುವುದು ಗುತ್ತಿಗೆದಾರರು ಹೆಚ್ಚು ಪಡೆಯುವುದನ್ನು ರದ್ದು ಮಾಡಲು ಈ ಒಪ್ಪಂದದಲ್ಲಿ ಸೇರಿಸಲಾಗಿದೆ.

ಈ ಒಪ್ಪಂದಕ್ಕೆ ಬರಲು ಯಾರದೋ ಕೃಪೆಕಟಾಕ್ಷವಿಲ್ಲ. ಕಾರ್ಮಿಕರ ಹೋರಾಟದ ಪರಿಣಾಮ ಸ್ಪಷ್ಟ. ಹಾಗೂ ಒಪ್ಪಂದದ ಪ್ರತಿ ಫಲ ನೇರವಾಗಿ ಕಾರ್ಮಿಕರ ಕೈಸೇರಬೇಕಾದರೂ ಕಾಂಟ್ರಾಕ್ಟ್‌ದಾರರ ವಂಚನೆಯ ವಿರುದ್ಧ ನಿತ್ಯ ನಿರಂತರ ಹೋರಾಟ ಅನಿವಾರ್ಯ.

ಈ ಒಪ್ಪಂದ ಬರಲು ಮುಖ್ಯವಾಗಿ ಹೋರಾಟದಲ್ಲಿ ಪಾತ್ರವಹಿಸಿದ ಕಾರ್ಯಕರ್ತರಿಗೂ, ಕಾರ್ಮಿಕರಿಗೂ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕ ಫೆಡರೇಷನ್ ಸಿ. ಐ. ಟಿ. ಯು. ಅಭಿನಂದಿಸುತ್ತದೆ.

ಮೇ 12-13 ರಂದು ಸೇರಿದ ರಾಜ್ಯಸಮಿತಿಯ ನಿರ್ಣಯ

ರಾಜ್ಯದ ರಾಜಕೀಯ ಪರಿಸ್ಥಿತಿ :

ಹೋದ ಫೆಬ್ರವರಿ, 13 ರಂದು ರಾಜ್ಯ ಸಮಿತಿ ಸೇರಿದಾಗ ಜನತಾ ಪಕ್ಷ ಅಧಿಕಾರಕ್ಕೆ ಬಂದು ಎರಡು ತಿಂಗಳಾಗಿತ್ತಷ್ಟೆ. ಜನತಾ ಪಕ್ಷ ಮತ್ತು ಕ್ರಾಂತಿರಂಗಗಳೊಳಗೆ ಅಂದರೆ ಬಂಗಾರಪ್ಪನವರ ಗುಂಪಿನೊಳಗೆ ಭಿನ್ನಾಭಿಪ್ರಾಯ ಪ್ರಾರಂಭವಾಗಿತ್ತು. ಆಗ ಜಂಟಿ ಸಮಾವೇಶದಲ್ಲಿ ರಾಜ್ಯಪಾಲರ ಭಾಷಣವೂ ಆಗಿತ್ತು. ಕಾಂಗ್ರೆಸ್‌ನವರು ಜನತಾಪಾರ್ಟಿಯಲ್ಲಿ ಭಿನ್ನಾಭಿಪ್ರಾಯ ಉಂಟುಮಾಡಲು ಪ್ರಯತ್ನ ಮಾಡಿದರೂ ಕೂಡ ಅದು ವಿಫಲವಾಗಿದೆಯೆಂದು ಕೌನ್ಸಿಲ್‌ಗೆ ನಡೆದ ಮತದಾನದಲ್ಲಿ ಕಂಡು ಬಂತು. ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಜನತಾ ಅಭ್ಯರ್ಥಿಗಳಿಗೆ 141 ಮತ ಬಿದ್ದು ಕಾಂಗ್ರೆಸ್ ಮತ್ತು ಬಂಗಾರಪ್ಪನವರ ನಿರೀಕ್ಷೆ ಸಂಪೂರ್ಣ ತಲೆಕೆಳಗಾಯಿತು.

ಜನತಾ ಪಕ್ಷಕ್ಕೆ ಸಂಪೂರ್ಣ ಬಹುಮತ ಇಲ್ಲದ ಪರಿಸ್ಥಿತಿಯಲ್ಲಿ ರಾಮಕೃಷ್ಣ ಹೆಗಡೆಯವರ ಮಂತ್ರಿ ಮಂಡಲ ಸ್ಥಾಪನೆಯಾಗಿತ್ತು. ಜನತಾ–ಕ್ರಾಂತಿರಂಗ ವಿಲೀನವಾಗಿದೆಯೆಂದು ಹೇಳುತ್ತಿದ್ದರೂ ಕೂಡ ಬಂಗಾರಪ್ಪನವರಿಗೆ ಮುಖ್ಯಮಂತ್ರಿ ಪದವಿ ಸಿಗಲಾರದಾದಾಗ, ಅವರು ಎರಡೂ ಪಕ್ಷಗಳು ವಿಲೀನಗೊಳ್ಳಲಿಲ್ಲವೆಂದು ಹೇಳಿ ತಮ್ಮ ಬೆಂಬಲಿಗರ ಪ್ರತ್ಯೇಕ ಸಮಾವೇಶ ಸೇರಿಸಿ 8 ಜನ ಶಾಸಕರನ್ನೊಳಗೊಂಡ ಕ್ರಾಂತಿರಂಗವನ್ನು ಸ್ಥಾಪಿಸಿದರು. ಬಂಗಾರಪ್ಪನವರ ಈ ನಿಲುವು ಕಾಂಗ್ರೆಗೆ ಹೆಚ್ಚು ಸಹಾಯವಾಯಿತು. ಸ್ವತಂತ್ರರು ಮತ್ತು ಸಿ.ಪಿ.ಐ.(ಎಂ.) – ಸಿ.ಪಿ.ಐ. ಬೆಂಬಲದಿಂದ ರಾಮಕೃಷ್ಣ ಹೆಗಡೆ ಸರಕಾರ ಸ್ಥಾಪನೆಯಾಯಿತು. ಬಿ.ಜೆ.ಪಿ. ಕೂಡ ಬೆಂಬಲ ವ್ಯಕ್ತಪಡಿಸಿತು.

ಮೂರು ವರ್ಷಗಳಲ್ಲಿ ಕಾಂಗ್ರೆಯ ಗುಂಡೂರಾವ್ ಸರಕಾರ ಸತತವಾಗಿ ರೈತರ, ಕಾರ್ಮಿಕರ, ವಿದ್ಯಾರ್ಥಿಗಳ ಮೇಲೆ ಗೋಳಿಬಾರ್ ಮಾಡುತ್ತ ಪೋಲೀಸರ ದಬ್ಬಾಳಿಕೆಯನ್ನು ಮುಂದುವರಿಸುತ್ತ ಬಂದಿರುವುದರಿಂದಲೂ, ಸುಳ್ಳು ಆಶ್ವಾಸನೆಗಳನ್ನೇ ಕೊಡುತ್ತಾ ಬಂದಿರುವುದರಿಂದಲೂ, ಆಡಳಿತ ಶಿಥಿಲಗೊಂಡಿರುವುದರಿಂದಲೂ ಜನತೆ ಕಾಂಗ್ರೆಗೆ ಬೇಸತ್ತು ವಿರೋಧ ಪಕ್ಷಗಳಿಗೆ ಮತ ನೀಡಿ ಜನತಾ ಪಾರ್ಟಿ ಅಧಿಕಾರಕ್ಕೆ ಬರುವಂತೆ ಮಾಡಿತು. ಜನತಾ ಕ್ರಾಂತಿರಂಗಗಳೆಲ್ಲ ಗುಂಡೂರಾವ್ ಸರಕಾರ ಜನತೆಯ ಮೇಲೆ ದಬ್ಬಾಳಿಕೆ ನಡೆಸಿದಾಗ ಅದನ್ನು ಪ್ರತಿಭಟಿಸಲು ಎಡಪಕ್ಷಗಳ ಜೊತೆಯಲ್ಲಿ ಸಹಕಾರ ಮಾಡಿದರು. ಜನತಾ–ಕ್ರಾಂತಿರಂಗದ ಹಾಗೆಯೇ ಸಿ.ಪಿ.ಐ (ಎಂ.) ಸಿ.ಪಿ.ಐ. ಪಕ್ಷಗಳ ಚುನಾವಣೆ ಘೋಷಣೆಗಳು ಜನರಲ್ಲಿ ಆಶಾಭಾವನೆಯನ್ನು ತುಂಬಿ, ಕಾಂಗ್ರೆಯನ್ನು ಸೋಲಿಸಿ ಜನತಾ ಪಕ್ಷ ಅಧಿಕಾರಕ್ಕೆ ಬರುವಂತೆ ಮಾಡಿತು. ಜನತಾ ಪಾರ್ಟಿ ಜನತೆಯ ಈ ಮನೋಭಾವವನ್ನು ನೆನೆಸಿಕೊಳ್ಳುವುದು ಅವಶ್ಯಗತ್ಯ.

ರಾಮಕೃಷ್ಣ ಹೆಗಡೆ ಅಧಿಕಾರಕ್ಕೆ ಬಂದ ಕೂಡಲೇ ಜನತೆಯೂ, ರೈತ ಕಾರ್ಮಿಕರೆಲ್ಲಾ ಶಾಂತಿಯುತ ಚಳವಳಿ ನಡೆಸುತ್ತಿರುವಾಗ ಅಂಥ ಚಳವಳಿಗಳಲ್ಲಿ ಪೋಲೀಸರ ಕೈವಾಡ ನಡೆಯುವುದಿಲ್ಲೆಂಬ ಸ್ಪಷ್ಟ ಆಶ್ವಾಸನೆಯನ್ನು ನೀಡಿದ್ದರು. ಕೆಲವು ಪೋಲೀಸರ ಗೋಳಿಬಾರ್‌ನ ಕುರಿತು ನ್ಯಾಯಾಂಗ ವಿಚಾರಣೆಗೂ ಆದೇಶ ನೀಡಿದರು. ರೇಶನ್ ಅಂಗಡಿಗಳಲ್ಲಿ ಮಾರಾಟವಾಗುವ ಆಹಾರ ಧಾನ್ಯಗಳ ಬೆಲೆ ಇಳಿಸುವ ಸಲುವಾಗಿ ಮಂತ್ರಿಗಳ ಉಪಸಮಿತಿ ನೇಮಿಸಿ ನಾಲ್ಕೈದು ದಿವಸದೊಳಗೆ ಕೆಲವು ಪೈಕಿ ಬೆಲೆ ಇಳಿಸುವ ಕ್ರಮ ಕೈಗೊಂಡರು.

ನೀರಿನ ಬರ, ಬರಗಾಲಗಳ ಪರಿಹಾರಕ್ಕಾಗಿ ಸಕಾಲದಲ್ಲೇ ಕೇಂದ್ರಕ್ಕೆ ಬರೆದು ಕೇಂದ್ರದ ಕಮಿಟಿಯೊಂದು ರಾಜ್ಯಕ್ಕೆ ಬರುವಂತೆ ಮಾಡಿತು. ಬರಗಾಲ ನಿವಾರಣೆಗೆ ಕೇಂದ್ರದಿಂದ ರೂ. 10 ಕೋಟಿಯಷ್ಟೇ ಬಂದರೂ ಕೂಡ ರಾಜ್ಯ ಬೊಕ್ಕಸದಲ್ಲಿ ಹಣ ಖರ್ಚು ಮಾಡಿ ರಿಗ್‌ಗಳ ಮೂಲಕ ಹಳ್ಳಿ ಜನರಿಗೆ ಕೆಲವು ಮಟ್ಟಿಗೆ ನೀರು ಪೂರೈಸುವ ವ್ಯವಸ್ಥೆ ಮಾಡಿತು.

ಲೋಕ ಆಯುಕ್ತ, ಉಪಲೋಕ ಆಯುಕ್ತ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಲಾಯಿತು. ಪಕ್ಷಾಂತರ ಮಸೂದೆ ತಯಾರಿಸಲಾಯಿತು. ಜಿಲ್ಲಾ ಪರಿಷತ್ತುಗಳನ್ನು ರಚಿಸಲಾಗುವುದೆಂಬ ಆಶ್ವಾಸನೆ ನೀಡಲಾಯಿತು. ನಗರಸಭೆ, ನಗರ ಕಾರ್ಪೊರೇಷನ್‌ಗಳಿಗೆ ಜೂನ್ ತಿಂಗಳೊಳಗಾಗಿ ಚುನಾವಣೆ ನಡೆಸುವ ಘೋಷಣೆ ಮಾಡಿ 18 ವಯಸ್ಸಿನವರಿಗೂ ಆ ಚುನಾವಣೆಗಳಲ್ಲಿ ಪಾಲ್ಗೊಳ್ಳಲು ಸಹಾಯವಾಗುವಂತೆ ಹೊಸ ಮತದಾರರ ಯಾದಿ ತಯಾರಿಸಲಾಯಿತು.

ದಕ್ಷಿಣ ಭಾರತದ 5 ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಕೇಂದ್ರ–ರಾಜ್ಯಗಳ ಸಂಬಂಧ ಕುರಿತು ಪುನರ್ವಿಮರ್ಶೆಗೆ ಹೊಸ ರೂಪ ಕೊಡಲಾಯಿತು. ಇದರಿಂದಾಗಿ ಕೇಂದ್ರ ಸರಕಾರ ಸರ್ಕಾರಿಯಾ ಸಮಿತಿ ನೇಮಕ ಮಾಡುವಂತಾಯಿತು.

ಜನತೆ ಜನತಾ ಸರ್ಕಾರದ ಈ ಕ್ರಮಗಳನ್ನೆಲ್ಲಾ ಸ್ವಾಗತ ಮಾಡಿತು. ಆದರೆ ಚುನಾವಣಾ ಘೋಷಣೆಯಲ್ಲಿ ಮತ್ತು ವಿಧಾನಸಭೆಯಲ್ಲಿತ್ತ ಆಶ್ವಾಸನೆಗಳು, ಕಾರ್ಯರೂಪದಲ್ಲಿ ತರುವಲ್ಲಿ ಹಾಗೆಯೇ ಕಾರ್ಮಿಕರ, ರೈತರ ಸಮಸ್ಯೆಗಳ ಕುರಿತು ಪರಿಹಾರ ಕಂಡುಹಿಡಿಯುವಲ್ಲಿ ರಾಜ್ಯ ಸರ್ಕಾರ ಸಮರ್ಪಕವಾಗಿಲ್ಲೆಂದು ಹೇಳಬೇಕಾಗುತ್ತದೆ.

ಬೆಂಗಳೂರು ಹಾಗೆಯೇ ಇತರೆಡೆಗಳಲ್ಲಿ ಕಾರ್ಮಿಕರ ಹಲವಾರು ಹೋರಾಟ ನಡೆಯುತ್ತಿದ್ದು ಇವುಗಳ ಕುರಿತು ಹಿಂದಿನ ಸರಕಾರದ ನಿಲುವಿಗೂ ಈಗಿನ ಸರ್ಕಾರದ ನಿಲುವಿಗೂ ಯಾವುದೇ ವ್ಯತ್ಯಾಸ ಕಂಡು ಬರುತ್ತಿಲ್ಲ.

ಮಾಲೀಕರಿಂದ ಕಾರ್ಮಿಕರ ಸುಲಿಗೆಯಾಗುತ್ತಿರುವುದನ್ನು ಮರೆತು, ಕಾರ್ಮಿಕರು ನ್ಯಾಯುವಾದ ಮುಷ್ಕರ ಹೂಡುತ್ತಿರುವಾಗಲೂ ಹಿಂದಿನ ಕಾಂಗ್ರೆಸ್ ಸರ್ಕಾರದ ನೀತಿಗನುಸಾರವಾಗಿ ಮಾಲೀಕರಿಗೆ ಸಹಾಯವಾಗುವ ರೀತಿಯಲ್ಲಿ, ಕಾರ್ಮಿಕರ ವಿರುದ್ಧ ಪ್ರತಿಬಂಧಕಾಜ್ಞೆಯನ್ನು ಹೇರಿ, ಪೋಲೀ

(ಕೊನೆಯ ಪುಟ ನೋಡಿ)

ಬಿ. ಡಿ. ಕೆ. ಅಲಾಯ್--ಸುಂದತ್ರಾ ಕಾರ್ಮಿಕರಿಗೆ ಬೆಂಬಲ

ಕಾ। ವಿ. ಎನ್. ಹಳಕಟ್ಟಿ ಅವರ ಅಧ್ಯಕ್ಷತೆಯಲ್ಲಿ ದಿನಾಂಕ 24-5-83 ರಂದು ಹುಬ್ಬಳ್ಳಿಯಲ್ಲಿ ಮಹಾನಗರದ ವಿವಿಧ ನೌಕರ-ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಜಂಟಿ ಸಭೆ ನಡೆದು ಸತತವಾಗಿ ಒಂದು ತಿಂಗಳಿಂದಲೂ ಮುಷ್ಕರ ನಿರತರಾಗಿರುವ ಬಿ.ಡಿ.ಕೆ. ಅಲಾಯ್ ಮತ್ತು ಸುಂದತ್ರಾ ಕೆಲಸಗಾರರಿಗೆ ತಮ್ಮ ಬೆಂಬಲ ಸೌಹಾರ್ದತೆ ವ್ಯಕ್ತಪಡಿಸಿದಲ್ಲದೆ ಮುಂದೆ ಹೋರಾಟವನ್ನು ತೀವ್ರಗೊಳಿಸುವ ಉದ್ದೇಶದಿಂದ ಅನೇಕ ಕಾರ್ಮಿಕ-ನೌಕರರ ಸಂಘಗಳ ಪ್ರತಿನಿಧಿಗಳನ್ನೊಳಗೊಂಡ ಜಂಟಿ ಹೋರಾಟ ಕ್ರಿಯಾ ಸಮಿತಿಯನ್ನು ರಚಿಸಲಾಗಿದೆ. ಬಿ. ಡಿ. ಕೆ. ಅಲಾಯ್ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿಯಾದ ಕಾ। ವ್ಹಿ. ಎಂ. ಪೂಜಾರ ಇವರನ್ನು ಜಂಟಿ ಹೋರಾಟ ಕ್ರಿಯಾ ಸಮಿತಿಯ ಸಂಚಾಲಕರನ್ನಾಗಿ ಒಮ್ಮತದಿಂದ ಆಯ್ಕೆ ಮಾಡಲಾಗಿದೆ.

ಸಭೆಯಲ್ಲಿ ಸಂದತ್ರಾ, ಬಿ.ಡಿ.ಕೆ. ವಿ.ಕೆ. ಇಂಡಸ್ಟ್ರೀಸ್, ಮೈಸೂರ್ ಕಿರ್ಲೋಸ್ಕರ್, ನಗರ ಕಾರ್ಮಿಕ ಸಂಘ, ಮೊಪೆಡ್ಸ್ ಕಾರ್ಮಿಕರ ಸಂಘ, ಪ್ಲಾಯ್‌ವುಡ್ ಕಾರ್ಮಿಕರ ಸಂಘ, ಹಮಾಲರ ಸಂಘ, ಟೈವಾಕ್ ಕಾರ್ಮಿಕರ ಸಂಘ, ಎಲ್. ಐ. ಸಿ. ನೌಕರರ ಸಂಘ, ಮಾಧ್ಯಮಿಕ ಶಾಲಾ ನೌಕರರ ಸಂಘ ಮತ್ತು ಕ. ವಿ. ವಿ. ಶಿಕ್ಷಕೇತರರ ನೌಕರರ ಸಂಘದ ಪ್ರತಿನಿಧಿಗಳು ದೊಡ್ಡ ಸಂಖ್ಯೆಯಲ್ಲಿ ಹಾಜರಿದ್ದು ಎಲ್ಲ ಸಂಘಗಳ ಪ್ರತಿನಿಧಿಗಳು ಮಾತನಾಡಿ ಹೋರಾಡುತ್ತಿರುವ ಕೆಲಸಗಾರರಿಗೆ ತನು-ಮನ-ಧನದಿಂದ ಸಹಾಯ-ಸಹಕಾರ ಕೊಡುವುದಲ್ಲದೆ, ಕ್ರಿಯಾ ಸಮಿತಿಯ ಸದಸ್ಯರ ಆದೇಶದ ಮೇರೆಗೆ ಸೌಹಾರ್ದ ಹೋರಾಟದಲ್ಲಿಯೂ ಭಾಗವಹಿಸುವುದಾಗಿಯೂ ಭರವಸೆ ಇತ್ತರು.

ದಿನಾಂಕ 28-5-1983ರಂದು ನಗರದಲ್ಲಿ ವಿವಿಧ ಕಾರ್ಮಿಕ-ನೌಕರರ ಸಂಘಟನೆಗಳು ಸಾಯಂಕಾಲ 4-30 ಘಂಟೆಯಿಂದ ಮುಷ್ಕರ ನಿರತ ಕೆಲಸಗಾರರ ಬೆಂಬಲಾರ್ಥ ಬೃಹತ್ ಮೆರವಣಿಗೆ ನಡೆಸಿತು.

ಉಡುಪಿ ಪ್ರೆಸ್ ಕಾರ್ಮಿಕರ ಮಹಾ ಸಭೆ

ಎಸ್.ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.)ನ ಉಡುಪಿ ವಿಭಾಗದ ಮಹಾ ಸಭೆಯು ತಾ। 22-5-83ರಂದು ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷ ಕಾ। ಯು. ಪಿ. ಡಿಸೋಜರ ಅಧ್ಯಕ್ಷತೆಯಲ್ಲಿ ಜರುಗಿತು.

ಯೂನಿಯನ್ನಿನ ಉಡುಪಿ ವಿಭಾಗದ ಸಹ ಸಂಚಾಲಕ ಕಾ। ಅಜಿತ್ ಕುಮಾರ್‌ರವರು ಅತಿಥಿಗಳನ್ನು ಸದಸ್ಯವರ್ಗದವರನ್ನೂ ಸ್ವಾಗತಿಸಿದ ನಂತರ ಸಂಚಾಲಕ ಕಾ। ಕೆ. ಲಕ್ಷ್ಮಣರಾವ್ ಅವರು ಮಂಡಿಸಿದ ವರದಿ ಹಾಗೂ ಲೆಕ್ಕ ಪತ್ರವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಈ ಸಭೆಯು ಬೆಲೆ ಏರಿಕೆಯನ್ನು ತಡೆಗಟ್ಟುವಂತೆ; ಪ್ರೆಸ್ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ತಕ್ಷಣ ನಿಗದಿಗೊಳಿಸಿ ಪೂರ್ವಾನ್ವಯವಾಗಿ ಜಾರಿಗೊಳಿಸುವಂತೆ, ಮಂಗಳೂರು 2ನೇ ವಿಭಾಗದ ಕಾರ್ಮಿಕ ಅಧಿಕಾರಿಯವರನ್ನು ತಕ್ಷಣ ನೇಮಿಸಬೇಕೆಂದು ಸರಕಾರವನ್ನು ಒತ್ತಾಯಿಸುವ ಠರಾವುಗಳನ್ನು ಅಂಗೀಕರಿಸಿತು.

ಸಭೆಯನ್ನುದ್ದೇಶಿಸಿ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷ ಕಾ। ಉಮಾನಾಥ್‌ರವರು ಸಂಘಟನೆಯ ಮಹತ್ವದ ಬಗ್ಗೆ ಮಾತನಾಡಿದರು.

ಮುಂದಿನ ವರ್ಷಕ್ಕೆ ಕಾ। ಕೆ. ಲಕ್ಷ್ಮಣರಾವ್ – ಸಂಚಾಲಕ, ಕಾ। ರಮೇಶ ಮೆಂಡನ್ ಮತ್ತು ಕಾ। ಅಜಿತ್‌ಕುಮಾರ್– ಸಹ ಸಂಚಾಲಕರಾಗಿ ಮತ್ತು ಕಾ। ವಿಶ್ವನಾಥ ರೈ— ಸಲಹೆಗಾರರಾಗಿರುವ 22 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಕಾ। ಭುಜಂಗ ಮಾರ್ಲರವರು ಸಭೆಯಲ್ಲಿ ಉಪಸ್ಥಿತರಿದ್ದು ಸಲಹೆ ಸೂಚನೆಗಳನ್ನು ನೀಡಿದರು.

ಕೊನೆಯಲ್ಲಿ ಸಹ ಸಂಚಾಲಕ ಕಾ। ರಮೇಶ್ ಮೆಂಡನ್‌ರವರು ಧನ್ಯವಾದವಿತ್ತರು.

ಬೆಂಗಳೂರು

ಬಿ. ಡಿ. ಎ. ಅಕ್ರಮ– ಸಿ. ಪಿ. ಎಂ. ಖಂಡನೆ

ಕಾ। ಪಿ. ರಾಮಚಂದ್ರರಾವ್ ಶಾಸಕರು ಮತ್ತು ರಾಜ್ಯ ಕಾರ್ಯದರ್ಶಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮತ್ತು ಪಕ್ಷದ ಇತರ ಮುಖಂಡರುಗಳು ಮೆ31ರಂದು ಮತ್ತಿಕೆರೆಬಳಿ ಇರುವ ಚಿಕ್ಕಮಾರನಹಳ್ಳಿಯ ಪರಿಧಿಯಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿತ್ತೆಂಬ ಸುಮಾರು 80 ಮನೆಗಳನ್ನು ಬಿ. ಡಿ. ಎ. ಬುಲ್ಡೋಜರು ನೆಲಸಮ ಮಾಡಿರುವ ಸ್ಥಳಕ್ಕೆ ಭೇಟಿ ನೀಡಿ ನಿರಾಶ್ರಿತ ನಿರ್ಗತಿಕರಿಗೆ ಸಾಂತ್ವನ ನೀಡಿದರು.

ಈ ಪ್ರದೇಶದಲ್ಲಿ ಕಳೆದ ಹಲವಾರು ವರ್ಷಗಳಿಂದ ಮನೆ ಕಟ್ಟಿಕೊಂಡು ಜನರು ಬದುಕುತ್ತಿದ್ದಾರೆ. ಕೆಲವು ನಿವೇಶನಗಳು ಒಳ್ಳೇ ಬೆಲೆ ಬಾಳುವ ಬಂಗಲೆಗಳಾಗಿದ್ದು ವಿದ್ಯುಚ್ಛಕ್ತಿ ನೀರು ಮುಂತಾಗಿ ವ್ಯವಸ್ಥೆ ಮಾಡಲಾಗಿದೆ. ಇಷ್ಟೆಲ್ಲಾ ನಡೆಯುವಾಗ ಬಿ. ಡಿ. ಎ. ತೆಪ್ಪನಿದ್ದು ಈಗ ಹಠಾತ್ತಾಗಿ ಹೋಗಿ ನಿವೇಶನಗಳನ್ನು ನೆಲಸಮ ಮಾಡಿರುವುದು ಖಂಡನೀಯವೆಂದು ಅವರು ಹೇಳಿದ್ದಾರೆ.

ಹಲವು ಅಧಿಕಾರಿಗಳಿಂದ ಆಶ್ವಾಸನೆ ಪಡೆದು ಹಲವು ವೇಳೆ ಲಂಚರುಸುವತ್ತು ನೀಡಿ ಮುಗ್ಧ ರೀತಿಯಲ್ಲಿ ನಿವೇಶನ ಕಟ್ಟಿಕೊಂಡಿದ್ದ ಇಲ್ಲಿನ ನಿವಾಸಿಗಳನ್ನು ನಿರ್ಗತಿಕರನ್ನಾಗಿ ಮಾಡುವ ಬಿ. ಡಿ. ಎ.ನ ಅಮಾನವೀಯ ಕೃತ್ಯ ಖಂಡನೀಯವಾಗಿದೆ. ನಿವೇಶನರಹಿತರಾದ ಅಲ್ಲಿನ ನಿರ್ಗತಿಕರಿಗೆ ಸರ್ಕಾರ ಕೂಡಲೆ ಪರಿಹಾರ ಕಾರ್ಯವನ್ನು ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ.

ಶಿವಮೊಗ್ಗ

ಪಕ್ಷದ ಸಭೆ

ತಾ॥ 22-5-1983ನೇ ಭಾನುವಾರ ಬೆಳಿಗ್ಗೆ 11 ಘಂಟೆಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪ್ರಾದೇಶಿಕ ಸಮಿತಿ ಸಭೆ ಸೇರಿತು. ಪಕ್ಷದ ಚಟುವಟಿಕೆಗಳ ಬಗ್ಗೆ ಕಾರ್ಯದರ್ಶಿ ಕಾ। ಚಂದುಕುಟ್ಟಿಯವರು ವರದಿ ಸಲ್ಲಿಸಿದರು. ವರದಿಯ ಮೇಲೆ ಚರ್ಚೆ ನಡೆದ ನಂತರ ಕೆಳಗೆ ಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಸಭೆ ಅಂಗೀಕರಿಸಿತು. ಚರ್ಚೆಯಲ್ಲಿ ಕಾ। ಕೃಷ್ಣಾಜಿ, ಕಾ। ಮೊಹಮ್ಮದ್ ರಫಿ, ಕಾ। ಶಿವಶಂಕರ ಮುಂತಾದವರು ಭಾಗವಹಿಸಿದರು.

ನಿರ್ಣಯಗಳು :—

1. ಪಕ್ಷದ ಕೇಂದ್ರ, ರಾಜ್ಯ ಹಾಗೂ ಜಿಲ್ಲೆಯ ಕೆಲಸ ಕಾರ್ಯಗಳಿಗೆ 1983ನೇ ವರ್ಷಕ್ಕೆ ರೂ. 10,000 (ರೂ. ಹತ್ತು ಸಾವಿರ) ವಸೂಲು ಮಾಡಬೇಕೆಂದೂ ತೀರ್ಮಾನ ಮಾಡಿ ಸಾರ್ವಜನಿಕರು ಧನ ಸಹಾಯ ನೀಡಬೇಕೆಂದೂ ಕೇಳಿಕೊಂಡರು.

2. ರೈತರ ಸಾಲ ಪಾವತಿಯ ಅವಧಿಯನ್ನು ಜೂನ್ ತಿಂಗಳ 30 ರಿಂದ ಮುಂದೂಡಿ ವಿಸ್ತರಿಸಬೇಕೆಂದು ಸಭೆಯು ಸರ್ಕಾರವನ್ನು ಒತ್ತಾಯಿಸುತ್ತದೆ.

3. ರೈತರಿಗೆ ಬೇಕಾದ ಗೊಬ್ಬರ, ಬೀಜ ಪ್ರತಿ ಹಳ್ಳಿಗಳಲ್ಲಿ ದಾಸ್ತಾನು ಮಾಡಿ ಹಳ್ಳಿಗಳಿಂದಲೇ ರೈತರಿಗೆ ಸುಲಭ ದರದಲ್ಲಿ ವಿತರಣೆ ಮಾಡಬೇಕೆಂದು ಈ ಸಭೆಯು ಸರ್ಕಾರವನ್ನು ಒತ್ತಾಯಿಸುತ್ತದೆ.

4. ನ್ಯಾಯ ಬೆಲೆ ಅಂಗಡಿಗಳ ಮೂಲಕ ಎಲ್ಲಾ ಅಗತ್ಯ ವಸ್ತುಗಳನ್ನು ನ್ಯಾಯ ಬೆಲೆಗೆ ಸಾರ್ವಜನಿಕರಿಗೆ ಸಿಕ್ಕುವಂತಾಗಿ ಏರ್ಪಾಡು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತದೆ.

5. ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರತಿ ತಿಂಗಳು ಅಕ್ಕಿ ಸಿಕ್ಕುವ ಭರವಸೆ ಇಲ್ಲ. ಪ್ರತಿ ತಿಂಗಳು ಒಂದು ಕಾರ್ಡಿಗೆ 50 ಕೇಜಿಯಾದರೂ ಅಕ್ಕಿ ಸರಬರಾಜು ಮಾಡಬೇಕೆಂದು ಈ ಸಭೆಯು ಸರ್ಕಾರವನ್ನು ಒತ್ತಾಯಿಸುತ್ತದೆ.

6. ಸೌದೆ ಬೆಲೆ ಟನ್ ಒಂದಕ್ಕೆ ರೂ. 200ರಿಂದ ಟನ್ ಒಂದಕ್ಕೆ ರೂ. 100ಗೆ ಇಳಿಸಬೇಕೆಂದು ಈ ಸಭೆಯು ಸರ್ಕಾರವನ್ನು ಒತ್ತಾಯಿಸುತ್ತದೆ.

ರೈತರ ಅಧ್ಯಯನ ಶಿಬಿರ

ದಿನಾಂಕ 26 – 5 – 1983ರಿಂದ 27-5-1983ರವರೆಗೆ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಅಂಬಲಗಾ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಎರಡು ದಿನಗಳ ರೈತರ ಅಧ್ಯಯನ ಶಿಬಿರವನ್ನು ಏರ್ಪಡಿಸಲಾಗಿತ್ತು.

ಕರ್ನಾಟಕ ಪ್ರಾಂತ ಸಂಘದ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾ। ವ್ಹಿ. ಎನ್. ಹಳಕಟ್ಟಿ ಎರಡು ದಿನಗಳ ಶಿಬಿರದಲ್ಲಿ ಅಂಬಲಗಾ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಿಂದ ಭಾಗವಹಿಸಿದ 40 ರೈತ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯ ಸಮಿತಿಯ ಸಹ ಕಾರ್ಯದರ್ಶಿ ಕಾ। ಚಂದ್ರಶೇಖರಪಾಳೆ ರೈತ ಸಂಘಟನೆ ಕುರಿತು ಮಾತನಾಡಿದರು.

ಕ. ಪ್ರಾ. ರೈ ಸಂಘದ ಜಿಲ್ಲಾ ಸಮಿತಿಯ ಖಜಾಂಚಿ ಕಾ। ಮಹಮದ್ ಹಸನ್‌ಖಾನ್ ಅವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಕೊನೆಯ ದಿನದ ಚರ್ಚೆಯಲ್ಲಿ ರೈತ ಪ್ರತಿನಿಧಿಗಳಾದ ಕಾ। ಮೇಘರಾಜ ಕಠಾರೆ, ಕಾ। ಕಲ್ಲಪ್ಪಬೇಲಿ, ಕಾ। ಮಾನಪಡೆ ಮುಂತಾದವರು ಪಾಲುಗೊಂಡರು.

ದಿನಾಂಕ 27-5-83ರಂದು ಸಂಜೆ 7 ಗಂಟೆಗೆ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾ। ವ್ಹಿ. ಎನ್. ಹಳಕಟ್ಟಿ. ಕಾ। ಕಲ್ಲಪ್ಪಕಿರಣಗಿ (ಜಿಲ್ಲಾ ಸಮಿತಿಯ ಕಾರ್ಯದರ್ಶಿ), ಕಾ। ಸುಭಾಸಬಾಣ ಮಾತನಾಡಿದರು.

ಕಾ। ಮೇಘರಾಜ ಕಠಾರೆ ವಂದನಾರ್ಪಣೆ ಮಾಡಿದರು.

ಡಿ. ವೈ. ಎಫ್. ಐ. ತರಬೇತಿ ಶಿಬಿರ

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಟಿ. ಗೊಲ್ಲಹಳ್ಳಿಯಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟ (ಡಿ. ವೈ. ಎಫ್. ಐ.)ದ ಪಂಚಾಯತಿ ಮಟ್ಟದ ಕಾರ್ಯಕರ್ತರ ತರಬೇತಿ ಶಿಬಿರ ಮೇ 3 ಮತ್ತು 4ರಂದು ಜರುಗಿತು. ಈ ಶಿಬಿರದಲ್ಲಿ ಟಿ. ಗೊಲ್ಲಹಳ್ಳಿ ಪಂಚಾಯಿತಿಗೆ ಸೇರಿದ ಆರು ಹಳ್ಳಿಗಳಿಂದ ಸುಮಾರು 50 ಮಂದಿ ಕಾರ್ಯಕರ್ತರು ಭಾಗವಹಿಸಿದ್ದರು. ಸುಬ್ಬರಾಯಪ್ಪ ಮತ್ತು ಜಿ. ಸಿ. ಬಯ್ಯಾರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು.

ಈ ಶಿಬಿರದಲ್ಲಿ ಡಿ.ವೈ.ಎಫ್.ಐ.ನ ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಜಿ. ವಿ. ಶ್ರೀರಾಮರೆಡ್ಡಿಯವರು ಭಾರತ ದೇಶದ ಪರಿಸ್ಥಿತಿ ಮತ್ತು ಯುವಜನರ ಕರ್ತವ್ಯದ ಕುರಿತು ವಿವರಿಸಿದರು. ಪಿ. ಎಂ. ನಾರಾಯಣ ಸ್ವಾಮಿಯವರು ಸಮಾಜ ಬೆಳವಣಿಗೆಯ ಚರಿತ್ರೆಯನ್ನು ವಿವರಿಸಿದರು. ಭಾರತ ವಿದ್ಯಾರ್ಥಿ ಒಕ್ಕೂಟದ (ಎಸ್. ಎಫ್. ಐ.) ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ನಿರುದ್ಯೋಗ, ವರದಕ್ಷಿಣೆ, ಜಾತಿ ಪದ್ಧತಿ ಮತ್ತು ವೈಜ್ಞಾನಿಕ ಮನೋಭಾವನೆಯ ಕುರಿತು ವಿಶ್ಲೇಷಿಸಿದರು. ಡಿ. ವೈ. ಎಫ್. ಐ. ಕೋಲಾರ ಜಿಲ್ಲಾ ಕಾರ್ಯದರ್ಶಿ ಸತ್ಯನಾರಾಯಣ ಸ್ವಾಮಿಯವರು ಸಂಘಟನಾ ವಿಚಾರಗಳ ಕುರಿತು ಮಾತನಾಡಿದರು.

ನಂತರ ನಡೆದ ಸರ್ವಸದಸ್ಯರ ಸಭೆಯಲ್ಲಿ ಪಂಚಾಯಿತಿ ಸಮಿತಿಯನ್ನು ರಚಿಸಲಾಯಿತು. 16 ಮಂದಿ ಸದಸ್ಯರ ಈ ಸಮಿತಿಯ ಅಧ್ಯಕ್ಷರಾಗಿ ಲಕ್ಷ್ಮಿನರಸಿಂಹಯ್ಯ, ಕಾರ್ಯದರ್ಶಿಯಾಗಿ ನಾರಾಯಣರೆಡ್ಡಿ ಆಯ್ಕೆಯಾದರು.

ಕರ್ನಾಟಕ ರಾಜ್ಯದ ಪೌರ ಕಾರ್ಮಿಕರ ಸಮಾವೇಶ

ಕರ್ನಾಟಕ ರಾಜ್ಯದ 264 ಪುರಸಭೆ, 6 ನಗರ ಕಾರ್ಪೊರೇಶನ್‌ಗಳಲ್ಲಿ ಮೂವತ್ತು ಸಾವಿರದಷ್ಟು ಪೌರ ಕಾರ್ಮಿಕರು ದುಡಿಯುತ್ತಿದ್ದು, ಅವರೆಲ್ಲ ಹಿಂದುಳಿದ ವರ್ಗಕ್ಕೆ ಸೇರಿದವರಿದ್ದಾರೆ. ಕೆಲವೇ ಮುನಿಸಿಪಾಲಿಟಿಗಳಲ್ಲಿ ಹಲವಾರು ವರ್ಷಗಳಿಂದ ಸಂಘಟಿತ ಹೋರಾಟ ಕೆಂಬಾವುಟದಡಿಯಲ್ಲಿ ನಡೆಯುತ್ತ ಬಂದಿದೆ. ಆದರ ಪ್ರತಿಫಲವಾಗಿ ರಾಜ್ಯ ಸರಕಾರಿ ನೌಕರರಿಗೆ ಸಿಗುತ್ತಿರುವ ಹೆಚ್ಚಿನ ಸೌಲಭ್ಯಗಳಲ್ಲಿ ಇವರಿಗೂ ಸಿಗುವಂತಾಗಿದೆ. ಊರು ಸ್ವಚ್ಛತೆಯ ಕೆಲಸದಲ್ಲಿ ಇವರೆಲ್ಲ ತೊಡಗಿದ್ದರೂ ಕೂಡ, ಸಮಾಜದಲ್ಲಿ ಇಂದಿಗೂ ಇವರನ್ನೆಲ್ಲ ಪ್ರತ್ಯೇಕವಾಗಿಯೇ ನೋಡಲಾಗುತ್ತಿದೆ. ಇವರಿಗೆ ಆರ್ಥಿಕ ಬೇಡಿಕೆಗಳನ್ನು ಕೊಡಿಸುವ ಜೊತೆಯಲ್ಲೇ ಸಾಮಾಜಿಕ-ರಾಜಕೀಯ ತಿಳುವಳಿಕೆ ಇವರಲ್ಲುಂಟು ಮಾಡುವ ಉದ್ದೇಶದಿಂದ ಸಿ. ಐ. ಟಿ. ಯು. ನೇತೃತ್ವದಲ್ಲಿ ಇವರನ್ನೆಲ್ಲ ಸಂಘಟಿಸುವ ಉದ್ದೇಶದಿಂದ ಮೇ 15ರಂದು ಮೈಸೂರಿನಲ್ಲಿ ರಾಜ್ಯ ಮಟ್ಟದ ಪೌರ ಕಾರ್ಮಿಕರ ಸಮ್ಮೇಳನ ಕರೆಯಲಾಗಿತ್ತು. ಕಾರ್ಮಿಕ ಮುಖಂಡ ಎಂ. ಎಸ್. ಉಗ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಿ. ಐ. ಟಿ. ಯು. ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರು ಸಮ್ಮೇಳನದ ಉದ್ಘಾಟನೆ ಮಾಡಿದರು. ರಾಜ್ಯ ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಮೋಹನ ಅವರು ಸ್ವಾಗತ ಭಾಷಣ ಮಾಡಿದರು. 150ಕ್ಕೂ ಮೇಲ್ಪಟ್ಟು ಪ್ರತಿನಿಧಿಗಳು ಬಂದಿದ್ದರು.

ಎನ್. ಕೆ. ಉಪಾಧ್ಯಾಯರು ಅಧ್ಯಕ್ಷರಾಗಿ, ಸಿ. ಕೆ. ಮೋನ ಮತ್ತು ಸವರಿದಾಸ್ ಉಪಾಧ್ಯಕ್ಷರಾಗಿ, ಡಿ. ಎಂ. ಖಲಾಸಿ ಪ್ರಧಾನ ಕಾರ್ಯದರ್ಶಿಯಾಗಿ, ಬಿ. ಡಿ. ರಾಮಯ್ಯ ಕಾರ್ಯದರ್ಶಿಯಾಗಿ, ಎಂ. ಎಸ್. ಉಗ್ರಪ್ಪನವರು ಖಜಾಂಚಿಯಾಗಿ ಆರಿಸಲ್ಪಟ್ಟರು.

ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಸಿ. ಐ. ಟಿ. ಯು. ಅಧ್ಯಕ್ಷ ಸೂರ್ಯನಾರಾಯಣರಾವ್, ಎನ್. ಕೆ. ಉಪಾಧ್ಯಾಯ, ಡಿ. ಎಂ. ಖಲಾಸಿ, ಬಿ. ಡಿ. ರಾಮಯ್ಯ ಭಾಷಣ ಮಾಡಿದರು. ಎಂ. ಎಸ್. ಉಗ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ರಾಜ್ಯ ಸಮಿತಿ ನಿರ್ಣಯ

(6ನೇ ಪುಟದಿಂದ)

ಸರು ಮಧ್ಯೆ ಪ್ರವೇಶಿಸುವಂತೆ ಮಾಡ ಲಾಗುತ್ತಿದೆ. ಯೂನಿಯನ್‌ಗಳ ಸಲುವಾಗಿ ಗುಪ್ತಮತದಾನ ನಡೆಸಲೂ ಸರಕಾರ ಮುಂದೆ ಬರುತ್ತಿಲ್ಲ. ಕಾರ್ಮಿಕರ ಬೇಡಿಕೆಗಳ ಪರಿಹಾರಕ್ಕೆ ಸಹಾಯ ಮಾಡುತ್ತಿಲ್ಲ.

ಬೀಡಿ, ತೋಟ, ಕೃಷಿ, ಸಿನೆಮಾ, ಹೋಟೆಲ್, ಮೋಟಾರ್ ಮೊದಲಾದ 26 ಕೈಗಾರಿಕೆಗಳಲ್ಲಿ ದುಡಿಯುವ ಲಕ್ಷಾಂತರ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಹೆಚ್ಚಿಸಲು ಸರ್ಕಾರ ಮಾಲೀಕರ ಮೇಲೆ ಒತ್ತಾಯ ತರುತ್ತಿಲ್ಲ. ಈ ಬಡ ಕಾರ್ಮಿಕರನ್ನು ಕಡೆಗಣಿಸುತ್ತಿದೆ.

19ನೇ ಜನವರಿ 1982ರಲ್ಲಿ ಅಖಿಲ ಭಾರತ ಮಟ್ಟದ ಸಾರ್ವತ್ರಿಕ ಮುಷ್ಕರ ನಡೆದಾಗ ಕಾರ್ಮಿಕರ ಹಾಗೂ ಜನರ ಮೇಲೆ ಹೇರಲ್ಪಟ್ಟ ಖಟ್ಲೆಗಳನ್ನು ಸರಕಾರ ಇನ್ನೂ ವಾಪಸ್ ಪಡೆದಿಲ್ಲ. ಹಾಗೆಯೇ ಬೆಲೆ ಹೆಚ್ಚಳದ ವಿರುದ್ಧ ವಿದ್ಯಾರ್ಥಿಗಳೂ, ರೈತರೂ ನಡೆಸಿದ ಹೋರಾಟದ ಸಮಯದಲ್ಲಿ ಹಾಕಲ್ಪಟ್ಟ ಖಟ್ಲೆಗಳನ್ನು ರದ್ದು ಮಾಡಿರುವುದಿಲ್ಲ.

ಜೂನ್ ತಿಂಗಳ ಅಂತ್ಯದೊಳಗಾಗಿ ರೈತರು ತಮ್ಮ ಸಾಲದ ಅಸಲನ್ನು ಮರುಪಾವತಿ ಮಾಡಿದರೆ ಪೂರ್ತಿ ಬಡ್ಡಿ ಮಾಫಿ ಮಾಡುವ ನಿರ್ಣಯ ಸ್ವಾಗತಾರ್ಹವಾಗಿದ್ದರೂ ಇದೇ ವರ್ಷ ಜೂನ್ ಕೊನೆಯ ದಿನವೆಂದು ನಿರ್ಣಯಿಸಿರುವುದು, ರಾಜ್ಯದ 14 ಜಿಲ್ಲೆಗಳ ಬರಗಾಲ ಪರಿಸ್ಥಿತಿಯಲ್ಲಿ ಸರಿಯಲ್ಲ. ರೈತರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಇನ್ನೂ ಪರಿಹಾರ ದೊರೆತಿಲ್ಲ. ಲಕ್ಷಾಂತರ ರೈತರಿಗೆ ದರಖಾಸ್ತು ಭೂಮಿಯ ಹಕ್ಕು ಪತ್ರಗಳನ್ನು ಕೊಡದಿರುವುದೂ ಅನ್ಯಾಯ.

ಅಕ್ಕಿ, ಜೋಳ, ಗೋಧಿ, ರಾಗಿ ಮುಂತಾದ ಆಹಾರ ಧಾನ್ಯದ ಬೆಲೆ ಹೆಚ್ಚಾಗುತ್ತಿದೆ. ಎಣ್ಣೆಯ ಬೆಲೆ ಕೈ ಮೀರುತ್ತಿದೆ. ಅಗ್ಗದರದ ರೇಷನ್ ಅಂಗಡಿಗಳಿಗೆ ಆಹಾರಧಾನ್ಯವೂ ಪೂರೈಸಲ್ಪಡದಿರುವುದರಿಂದ ಜನರು ಬೆಲೆ ಹೆಚ್ಚಳದ ಬಹಿರಂಗ ಮಾರ್ಕೆಟ್ಟನ್ನೇ ಅವಲಂಬಿಸಬೇಕಾಗಿದೆ. ಹಿಂದೆಂದೂ ಕಾಣದಷ್ಟು ಅಕ್ಕಿಯ ಬೆಲೆ ಹೆಚ್ಚಾಗಿರುವುದು ಆಶ್ಚರ್ಯಕರ. ಕಛೇರಿಗಳಲ್ಲಿ ಭ್ರಷ್ಟಾಚಾರ, ಅದಕ್ಷತೆ ಹಾಗೆಯೇ ಮುಂದುವರೆದಿದೆ. ಜನರಿಗೆ ಯಾವ ರೀತಿಯ ಬದಲಾವಣೆಯೂ ಕಾಣುತ್ತಿಲ್ಲ. ಅಭಿವೃದ್ಧಿ ಕಾರ್ಯಗಳ ಮಂದಗತಿಯಿಂದಾಗಿ ಕುಡಿಯುವ ನೀರು, ಬರಗಾಲ ಪರಿಹಾರ ಕಾರ್ಯಗಳು ಸಮಾಧಾನಕರವಾಗಿ ನಡೆಯುತ್ತಿಲ್ಲ. ಸರಕಾರಿ ಕಛೇರಿಗಳಲ್ಲಿ ಐವತ್ತು ಸಾವಿರಕ್ಕೂ ಮೇಲ್ಪಟ್ಟ ಖಾಲಿ ಜಾಗಗಳನ್ನು ತುಂಬಿಲ್ಲ. ಸ್ಟೈಪೆಂಡರಿಯವರನ್ನು ಖಾಯಂಗೊಳಿಸಿಲ್ಲ, ಅವರ ಪಗಾರ ಹೆಚ್ಚಿಸಿಲ್ಲ.

ಜನತಾ ಸರಕಾರದ ಕುರಿತು ಸಾರ್ವಜನಿಕರಲ್ಲಿ ಸಾಕಷ್ಟು ಸಹಾನುಭೂತಿ ಇದ್ದರೂ ಎಡ ಪಕ್ಷಗಳು, ಅವರಿಗೆ ಬೆಂಬಲ ನೀಡುತ್ತಿದ್ದರೂ ಕೂಡ, ಸಾರ್ವಜನಿಕ ಸಮಸ್ಯೆಗಳನ್ನು ಎದುರಿಸಿ ಪರಿಹಾರ ಕೊಡಿಸುವುದರಲ್ಲಿ ಸರಕಾರ ಹಿಂದೇಟು ಹಾಕುತ್ತಿರುವುದು, ದೃಢ ಮನಸ್ಸಿನಿಂದ ಕೆಲಸ ಮಾಡದಿರುವುದು ದುರದೃಷ್ಟಕರ. ಅಷ್ಟೇ ಅಲ್ಲ ಜನತೆಯ ಪೂರ್ಣ ಬೆಂಬಲವಿದ್ದಾಗ್ಯೂ ವ್ಯಾಪಾರಸ್ಥರು, ಉದ್ಯೋಗಸ್ಥರು, ಸ್ವಹಿತ ಸಾಧಕರು, ಜಾತಿವಾದಿಗಳ ವಿರುದ್ಧ ಧೃಡ ಮನಸ್ಸಿನಿಂದ ವಿರೋಧಿಸಿ ಜನರಿಗೆ ಪರಿಹಾರ ಕೊಡಿಸಲು, ನ್ಯಾಯ ದೊರಕಿಸಲು ಮುಂದೆ ಬಾರದಿರುವುದು ಸರಿಯಲ್ಲ. ಜನತಾ ಪಕ್ಷದ ಜನತಾ ಸರಕಾರದ ಚಂಚಲತೆ, ತಮಗಿರುವ ಜನತೆಯ ಬೆಂಬಲದ ಸರಿಯಾದ ತಿಳುವಳಿಕೆ ಇಲ್ಲದಿರುವುದರಿಂದಲೇ ಜಾತೀಯ ಪಕ್ಷವಾದ ಬಿಜೆಪಿ ಜೊತೆಯಲ್ಲಿ ಸ್ಥಾಪಿತ ಹಿತಾಸಕ್ತಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದೆ. ಈ ಕಾರಣದಿಂದಾಗಿಯೇ ಜನರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ದೃಢನಿಲುವಿನಿಂದ ಪರಿಹರಿಸಲು ಜನತಾ ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಸಾರ್ವಜನಿಕರ, ರೈತ ಕಾರ್ಮಿಕರ ಯುವಜನತೆಯ ಬೆಂಬಲ ಜನತಾ ಸರಕಾರಕ್ಕಿರುವಾಗ ಅದು ಧೃಡ ನಿಲುವಿನಿಂದ ವರ್ತಿಸಬೇಕೆಂದೂ, ಕಾರ್ಮಿಕರ ರೈತರ ಪರವಾದ ನಿಲುವು ತಾಳಬೇಕೆಂದೂ ಪ್ರತಿಬಂಧಕಾಜ್ಞೆ ಹೇರುವ ಕ್ರಮ ಬಿಟ್ಟುಕೊಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ರಾಜ್ಯ ಸಮಿತಿ ಅಭಿಪ್ರಾಯಪಡುತ್ತದೆ. ಚುನಾವಣೆಯ ಸಮಯದಲ್ಲಿ ಜನತೆಗಿತ್ತ ಆಶ್ವಾಸನೆಗಳನ್ನು ನೆನೆಸಿಕೊಳ್ಳಬೇಕೆಂದೂ ಕೇಳಿಕೊಳ್ಳಬೇಕೆಂದೂ ಕೇಳಿಕೊಳ್ಳುತ್ತದೆ.

ಅದೇ ಸಮಯದಲ್ಲಿ ಜನತೆ ಹಾಗೆಯೇ ರೈತ ಕಾರ್ಮಿಕರೆಲ್ಲಾ ತಮ್ಮ ಹೋರಾಟವನ್ನು ಸಡಿಲಗೊಳಿಸಬಾರದೆಂದೂ ತಮ್ಮ ನ್ಯಾಯಪರವಾದ ಹಕ್ಕುಗಳಿಗಾಗಿ ಚುನಾವಣಾ ಘೋಷಣೆಗಳ ಜಾರಿಗಾಗಿ ಸಾಮೂಹಿಕ ಸಂಘಟನೆಗಳೂ, ಜನತೆಯು ತಾವೇ ಸ್ವತಂತ್ರ ಐಕ್ಯ ಹೋರಾಟಗಳನ್ನು ಮುಂದುವರಿಸಬೇಕೆಂದೂ ಸಿ. ಪಿ. ಐ. (ಎಂ). ಕರ್ನಾಟಕ ರಾಜ್ಯ ಸಮಿತಿ ಕರೆ ಕೊಡುತ್ತದೆ. ಆದರೆ ಇಂಥ ಹೋರಾಟಗಳಿಂದ ಕಾಂಗ್ರೆಸ್ ಲಾಭ ಪಡೆದು ಜನತಾ ಸರ್ಕಾರವನ್ನು ಉರುಳಿಸುವ ಹೊಂಚಿಗೆ ಸಹಾಯಕವಾಗದಂತೆ ತಂತಮ್ಮ ಹೋರಾಟ ನಡೆಸಬೇಕೆಂದೂ ಪಕ್ಷ ಕರೆ ಕೊಡುತ್ತದೆ.

ಸಿ.ಐ.ಟಿ.ಯು ರಾಜ್ಯ ಸಮಿತಿಯ ಪ್ರಕಟಣೆ

ಪ್ರಿಯ ಸಂಗಾತಿ,

ಜೆ. ಕೆ. ಒಂದು ಏಕಸ್ವಾಮ್ಯ ಸಂಸ್ಥೆ. ಈ ಸಂಸ್ಥೆಯು ತನ್ನ ಕೈಗಾರಿಕಾ ಘಟಕಗಳಲ್ಲಿ ಕಾನೂನು ಬಾಹಿರವಾದ ಲಾಕೌಟ್, ರಿಟ್ರೆಂಚ್‌ಮೆಂಟ್ ಇತ್ಯಾದಿಗಳನ್ನು ನಡೆಸಿ ಕಾರ್ಮಿಕರು ಸುದೀರ್ಘವಾದ ಹೋರಾಟ ಮಾಡಿ ಬಳಲಿ ಶರಣಾಗುವಂತೆ ಮಾಡುತ್ತಿದೆ. ಈ ದಬ್ಬಾಳಿಕೆ ಈಗಾಗಲೇ ರಿಷ್ರಾದಲ್ಲಿರುವ ಜೆ. ಕೆ. ಸ್ಟೀಲ್‌ನಲ್ಲಿ, ಪಶ್ಚಿಮ ಬಂಗಾಳ, ಹೂಗ್ಲಿ ಜಿಲ್ಲೆಯಲ್ಲಿರುವ ಬಾನ್ಸ್‌ಬೆರಿಯಾದ ಗ್ಯಾಂಜೀಸ್ ಜೂಟ್ ಮಿಲ್ಸ್‌ನಲ್ಲಿ, ಕಾನ್‌ಪುರದಲ್ಲಿರುವ ಜೆ. ಕೆ. ರೇಯಾನ್ಸ್‌ನಲ್ಲಿ ನಡೆದಿದೆ. ಈಗ ಕೋಟಾದಲ್ಲಿರುವ ಜೆ. ಕೆ. ಸಿಂತೆಟಿಕ್ಸ್‌ನಲ್ಲಿ ನಡೆಸುತ್ತಿದೆ. ಕೋಟಾದಲ್ಲಿ 2400 ಕಾರ್ಮಿಕರನ್ನು ರಿಟ್ರೆಂಚ್ ಮಾಡಲಾಗಿದೆ. ಈ ರಿಟ್ರೆಂಚ್‌ಮೆಂಟ್ ಕಾನೂನು ಬಾಹಿರವಾದುದು ಎಂದು ರಾಜಸ್ಥಾನ ಸರ್ಕಾರವು ಒಪ್ಪಿದೆ. ಆದರೆ ಮೂರೂವರೆ ತಿಂಗಳು ಕಳೆದರೂ ಈ ಸರ್ಕಾರವು ಜೆ. ಕೆ. ಸಿಂತೆಟಿಕ್ಸ್‌ನ ಆಡಳಿತ ಮಂಡಳಿಯ ಮೇಲೆ ಯಾವ ಕ್ರಮವನ್ನೂ ಜರುಗಿಸಿಲ್ಲ.

ಸಂಸತ್ತಿನಲ್ಲಿ ಕಾ। ಪಿ. ರಾಮಮೂರ್ತಿ, ಕಾ। ಸೋಮನಾಥ ಚಟರ್ಜಿ, ಕೇಂದ್ರ ಸರ್ಕಾರದ ಗಮನವನ್ನು ಸೆಳೆದಿದ್ದರೂ ಏನೂ ಆಗಿಲ್ಲ.

ದೇಶದಲ್ಲಿರುವ ಎಲ್ಲಾ ಸಿ. ಐ. ಟಿ. ಯು. ಕಾರ್ಮಿಕ ಸಂಘಗಳು ಕೋಟಾದ ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸಬೇಕೆಂದೂ, ರಾಜಸ್ಥಾನದ ಮುಖ್ಯಮಂತ್ರಿಗೆ ತಂತಿಗಳನ್ನು ಕಳುಹಿಸಬೇಕೆಂದೂ, ತಂತಿಗಳ ಪ್ರತಿಗಳನ್ನು "ಸಿ.ಐ.ಟಿ.ಯು. ರಾಜಸ್ಥಾನ ರಾಜ್ಯ ಸಮಿತಿ, ಬಿ-4, ಎಂ. ಎಲ್. ಎ. ಕ್ವಾರ್ಟರ್ಸ್, ಜಯಪುರ್" ಈ ವಿಳಾಸಕ್ಕೆ ಕಳುಹಿಸಬೇಕೆಂದು ಸಿ. ಐ. ಟಿ. ಯು. ಕೇಂದ್ರವು ತಾ॥ 7-5-1983ರಂದು ಕರೆಕೊಟ್ಟಿದೆ. ಈ ಸುತ್ತೋಲೆಯು ಇಲ್ಲಿ ನಮಗೆ ತಾ॥ 27-5-1983ರಂದು ತಲುಪಿದೆ.

ಈ ಸುತ್ತೋಲೆ ತಲುಪಿದ ಕೂಡಲೇ ಪ್ರತಿಯೊಂದು ಕಾರ್ಮಿಕ ಸಂಘವೂ ಪ್ರತ್ಯೇಕ ಪ್ರತ್ಯೇಕವಾಗಿ ರಾಜಸ್ಥಾನದ ಮುಖ್ಯಮಂತ್ರಿಗೆ ತಂತಿಗಳನ್ನು ಕಳುಹಿಸಬೇಕೆಂದೂ, ತಂತಿಯ ಪ್ರತಿಯನ್ನು ಮೇಲೆ ಕೊಟ್ಟಿರುವ ಸಿ.ಐ.ಟಿ.ಯು. ರಾಜಸ್ಥಾನ ರಾಜ್ಯ ಸಮಿತಿಗೆ ಕಳುಹಿಸಬೇಕೆಂದೂ ಕೇಳಿಕೊಳ್ಳುತ್ತೇವೆ. ದಯಮಾಡಿ ಕೂಡಲೇ ಕಾರ್ಯೋನ್ಮುಖರಾಗಿರಿ, ತಂತಿ ಕೊಟ್ಟ ವಿಷಯವನ್ನು ಕೂಡಲೇ ಕರ್ನಾಟಕ ರಾಜ್ಯ ಸಮಿತಿಗೆ ತಿಳಿಸಿರಿ.

ಇತಿ ವಿಪ್ಲವ ವಂದನೆಗಳು,

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಒಂದು ಬಹಿರಂಗ ಪತ್ರ

ಸನ್ಮಾನ್ಯ ಮುಖ್ಯಮಂತ್ರಿಗಳೇ,

ಕಳೆದ ಚುನಾವಣೆಯ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾನು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಉಮೇದ್ವಾರನಾಗಿ ಸ್ಪರ್ಧಿಸಿದಾಗ "ಗುಂಡೂರಾಯರ ಕಾಂಗ್ರೆಸ್ಸು (ಐ) ಸರಕಾರವು ಜಾರಿಗೆ ತಂದ ಭೂ-ಛಿದ್ರೀಕರಣ ಕಾನೂನು (ಫ್ರೇಗ್‌ಮೆಂಟೇಶನ್ ಏಕ್ಟ್) ಮತ್ತು ಕನ್‌ವರ್‌ಶನ್ ಕಾನೂನುಗಳಿಗೆ **ಯೋಗ್ಯ ತಿದ್ದುಪಡಿಗಳನ್ನು ತಂದು** ಈಗ ಒಂದು ಚಿಕ್ಕ ತುಂಡುಭೂಮಿಯನ್ನು ಮಾರಾಟಮಾಡಲು ಮತ್ತು ಒಂದು ಸಣ್ಣ ಮನೆಯನ್ನು ಕಟ್ಟುವ ಸಲುವಾಗಿ ಹಾಕಿದ ನಾಗರಿಕರ ಸಾವಿರಾರು ಅರ್ಜಿಗಳು ವರ್ಷಗಟ್ಟಲೆ ಕೊಳೆಯುತ್ತಿರುವ ಈಗಿನ ಪರಿಸ್ಥಿತಿ"ಯನ್ನು ಬದಲಾಯಿಸಲು ಪ್ರಯತ್ನಿಸುತ್ತೇನೆ ಎಂದು ಭರವಸೆಯನ್ನು ಕೊಟ್ಟಿದ್ದೇನೆ.

ನನ್ನ ಪಕ್ಷವೂ ಇತರ ಎಲ್ಲಾ ವಿರೋಧ ಪಕ್ಷಗಳೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಭರವಸೆಯನ್ನು ಕೊಟ್ಟಿದ್ದವು.

ಅಲ್ಲದೆ, 'ಅರ್ಬನ್ ಸೀಲಿಂಗ್ ಏಕ್ಟ್'ನಿಂದಾಗುತ್ತಿರುವ ತೊಂದರೆಗಳನ್ನು ನಿವಾರಿಸಲು ಕೂಡಾ ಶ್ರಮಿಸುತ್ತೇವೆ ಎಂದೂ ಜನತೆಗೆ ಆಶ್ವಾಸನೆಯನ್ನು ಕೊಡಲಾಗಿತ್ತು.

ಈ ಬಗ್ಗೆ ಚುನಾವಣೆಯಾದಾಕ್ಷಣದಿಂದ, ಜನತಾ ಸರ್ಕಾರ ಅಧಿಕಾರಕ್ಕೇರಿದಂದಿನಿಂದ, ನೀವು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕಾರಮಾಡಿದಂದಿನಿಂದ ನಾವು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಪ್ರತ್ಯೇಕ ಪ್ರತ್ಯೇಕವಾಗಿಯೂ, ಒಟ್ಟಾಗಿಯೂ ಹತ್ತು ಹಲವು ಬಾರಿ ಮನವಿ, ಮಾತುಕತೆ, ಚರ್ಚೆಗಳನ್ನು ನಡೆಸುತ್ತಾ ಬಂದಿದ್ದೇವೆ. ಅಧಿಕಾರಗಳ ಮಟ್ಟಗಳಲ್ಲೂ ಹಲವು ಭಾರಿ 'ಯಾವ ರೀತಿಯಲ್ಲಿ ತಿದ್ದುಪಡಿಗಳನ್ನು ತಂದು, ಜನತೆಯ ಮೇಲೆ ಅನ್ಯಾಯವಾಗಿ ಆಗುತ್ತಿರುವ ತೊಂದರೆ-ಕಿರುಕುಳಗಳನ್ನು ಹೋಗಲಾಡಿಸಲು ಶ್ರಮವಹಿಸಬೇಕೆಂಬುದರ ಕುರಿತು ಮಾತುಕತೆ ನಡೆಸಲಾಯಿತು,

ಕೆಲವೇ ದಿನಗಳಲ್ಲಿ, 15 ದಿನಗಳಲ್ಲಿ, ಒಂದು ತಿಂಗಳ ಒಳಗೆ ಕೊನೆಗೆ, ಫೆಬ್ರುವರಿ-ಮಾರ್ಚ್ ಅಧಿವೇಶನ ಮುಗಿಯುವದರ ಒಳಗೆ, ಆ ಮೇಲೆ ಅಧಿವೇಶನ ಮುಗಿದಾಕ್ಷಣ ಈ ಬಗ್ಗೆ ಈ ಆಶ್ವಾಸನೆಗಳನ್ನು ಈಡೇರಿಸಲಾಗುವುದು ಎಂದು ನಿಮ್ಮಿಂದ, ನಿಮ್ಮ ಮಂತ್ರಿಗಳಿಂದ, ನಿಮ್ಮ ಅಧಿಕಾರಿಗಳಿಂದ ಭರವಸೆಯು ನಮಗೆ ಎಂ. ಎಲ್. ಎ.ಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿಯೂ, ಒಟ್ಟಾಗಿಯೂ ಸಿಗುತ್ತಾ ಬಂದಿತ್ತು.

ಈ ದಿಸೆಯಲ್ಲಿ ಸರಕಾರದ ಹುಕುಂ-ಸುಗ್ರೀವಾಜ್ಞೆಗಳನ್ನು ಚಾತಕ ಪಕ್ಷಿಗಳಂತೆ ನಾವು ಕಾಯುತ್ತ ಕುಳಿತೆವು. ಮತ್ತು ನಮ್ಮ ಜಿಲ್ಲೆಯ ಜನತೆಗೆ ನಿಮ್ಮ ಹೇಳಿಕೆಗಳ ಆಧಾರದಲ್ಲಿ ಪುನಃ ಭರವಸೆ ಕೊಡುತ್ತಾ ಬಂದೆವು.

ಆದರೆ, ಇದೀಗ ಜೂನ್ ಆರಂಭವಾದರೂ ಈ ಭರವಸೆಗಳು ಈಡೇರದಿರುವುದು ನಿಜವಾಗಿ ವಿಷಾದನೀಯ.

ಆದ್ದರಿಂದ, ನಾನು ಜಿಲ್ಲೆಯ ಒಬ್ಬ ಜವಾಬ್ದಾರಿಯುತನಾದ ಶಾಸಕನಾಗಿ ನಿಮಗೆ ತಿಳಿಸುವುದೇನೆಂದರೆ–ಇನ್ನು 15 ದಿನಗಳ ಒಳಗೆ ನೀವು ಈ ದಿಸೆಯಲ್ಲಿ ಶ್ರಮವಹಿಸಿ ದ. ಕ, ಜಿಲ್ಲೆಯ ಎಲ್ಲ ನಾಗರಿಕರ ಒಕ್ಕೊರಲಿನ ಅಭಿಪ್ರಾಯಗಳಿಗೆ ಹಾಗೂ ನಾವು–ಜನತಾ ಪಕ್ಷ ಮತ್ತಿತರ ಮಿತ್ರಪಕ್ಷಗಳು ಜನತೆಗೆ ಕೊಟ್ಟ ಚುನಾವಣಾ ಆಶ್ವಾಸನೆಗಳಿಗೆ ಸಮಂಜಸವಾದ ರೀತಿಯಲ್ಲಿ ಸಮಾಧಾನವಾಗುವ ಕ್ರಮಗಳನ್ನು ತೆಗೆದುಕೊಳ್ಳಲು ಮುಂದಾಗದಿದ್ದರೆ... ಜಿಲ್ಲೆಯ ಇತರ ಎಂ.ಎಲ್.ಎಗಳ ಜತೆ ಸೇರಿ, ಪಕ್ಷ ಭಿನ್ನತೆಯನ್ನು ಬದಿಗಿಟ್ಟು, ಶಾಂತರೀತಿಯ ಸತ್ಯಾಗ್ರಹ ಮೊದಲಾದ ಪ್ರತ್ಯಕ್ಷ ಕಾರ್ಯಕ್ರಮಗಳ ದಾರಿ ಹಿಡಿಯಲು ನಿರ್ಬಂಧಿತನಾಗುತ್ತೇನೆ,

ಮುಂದಿನ ಹೆಜ್ಜೆ ಇಡುವ ಮೊದಲು ನಿಮ್ಮ ಕಡೆಯಿಂದ 'ಯೋಗ್ಯಕ್ರಮಗಳನ್ನು ಅಪೇಕ್ಷಿಸುತ್ತಿರುವ,'

ನಿಮ್ಮ ವಿಶ್ವಾಸಪೂರ್ವಕ ಶಾಸಕ
ಪಿ. ರಾಮಚಂದ್ರರಾವ್
ಉಳ್ಳಾಲ, ದ. ಕ. ಜಿಲ್ಲೆ

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO